ಕೊರವಂಜಿ

Koravanji

ಜೂನ್

೧೯೬೪



ಸಂಪಾದಕರು

ಶ್ರೀ|| ರಾ. ಶಿ.


ಬರಹಗಾರರು :

ಶ್ರೀ|| ಪಾಪಿ
ಶ್ರೀ|| ಅ. ರಾ. ಸೇ.
ಶ್ರೀ|| ಬಂಗಾರಯ್ಯ
ಶ್ರೀ|| ಬಚ್ಚ
ಶ್ರೀ|| ಸಿ. ಕೆ. ಎನ್. ರಾಜು
ಶ್ರೀ|| ಕೆ. ಎನ್. ಕಿಟ್ಟಿನ್
ಶ್ರೀ|| ಬಿಜಾಯರ್
ಶ್ರೀ|| ಪ್ರಸಾದ್
ಶ್ರೀ|| ಕೊಳ್ಳೇಗಾಲದ್ವಾರಾಮಾನುಜ
ಶ್ರೀ|| ಪ್ರಕಾಶ್
ಶ್ರೀ|| ದಾಶರಥಿ ದೀಕ್ಷಿತ್

ಇತ್ಯಾದಿ ಇತ್ಯಾದಿ

ಬಿಡಿ ಪ್ರತಿ
ಕೇವಲ

ತಿಳಿನಗೆಯ ಮಾಸಪತ್ರಿಕೆ


ಜೂನ್ ತಿಂಗಳಲ್ಲಿ ಪ್ರದರ್ಶನಾರಂಭ..
ಶ್ರೀ ಗಣೇಶ್ ಚಿತ್ರ ರವರ
ಕಲಿತರೂ ಹೆಣ್ಣೇ
(ಕನ್ನಡ)

ಕೊರವಂಜಿ

ಸಂಪುಟ ೨೨ ಜೂನ್ ೧೯೬೩ ಸಂಚಿಕೆ ೩

★ ಕುಹಕಿಡಿಗಳು ★

ಕೃಷ್ಣಮೆನನ್ನರು ಅಮ್ರೋಹಾದಲ್ಲಿ ಕಾಂಗ್ರೇಸ್ ಅಭ್ಯರ್ಥಿಯ ಪರವಾಗಿ ಚುನಾವಣಾ ಭಾಷಣಗಳನ್ನು ಮಾಡಿದ್ದರಿಂದ

—ಆಚಾರ್ಯ ಕೃಪಲಾನಿಯವರು ಗೆದ್ದರು ಎನ್ನುವುದು ಖಚಿತವಲ್ಲ.

* * * *

ಅಮರೋಹಾದ ಸುಮಾರು ಮನೆಗಳಲ್ಲಿ ಇದ್ದಕ್ಕಿದ್ದ ಹಾಗೆ ಹಾಲು ಒಡೆದು ಹೋಯಿತಂತೆ

—ಈಗ ಕಾರಣ ಗೊತ್ತಾಗಿದೆಯಂತೆ. ಆಚಾರ್ಯಕೃಪಲಾನಿಯವರ ಹುಳಿ ಹುಳಿ ಮಾತುಗಳು ಹೀಗೆ ಮಾಡಿತು ಅಂತ.

* * * *

ಆಚಾರ್ಯಕೃಪಲಾನಿ, ರಾಂಮನೋಹರ ಲೋಹಿಯಾ, ಮೀನೂ ಮಸಾನಿ, ಇವರುಗಳು ಚುನಾವಣೆಯಲ್ಲಿ ಕಾಂಗ್ರೇಸ್ ಅಭ್ಯರ್ಥಿಗಳನ್ನು ಸೋಲಿಸಿದರಂತೆ

--ಚೀಣೀ ಹುಣ್ಣಿನಮೇಲೆ, ಬರೆಹಾಕಿದಹಾಗೆ ಆಯಿತು, ದಿಳ್ಳೀಲಿ, ಪಾಪ.

* * * *

ಇದು ಕೇಳಿದಿರಾ? ಮೊನ್ನೆ ಪ್ರಾಣಿಸಂಗ್ರಹಾಲಯದಲ್ಲಿ ಹೆಣ್ಣು ಆಮೆಯನ್ನು ವಯಸ್ಸೆಷ್ಟು ಎಂದು ಕೇಳಿದಾಗ ಹದಿನೆಂಟು ಎಂದು ಕಣ್ಣು ಮಿಟಿಕಿಸುತ್ತಾ ರಾಗ ಎಳೆಯಿತಂತೆ.

* * * *

ಎಲ್ಲತರಹ ಕಾಗದದ ಬೆಲೆಯು ಏರುತ್ತಿದೆ (ಸುದ್ದಿ.)

—ಆದರೆ ಒಂದು ತರಹ ಕಾಗದದ ಬೆಲೆ ಇಳಿದುಹೋಗುತ್ತಿದೆ ನೋಟುಗಳು ಎಂದು ಅನ್ನಿಸಿಕೊಂಡವು?

ಕೃತಕ ನೋಟುಗಳನ್ನು ಬಹಳ ಯಶಸ್ವಿಯಾಗಿ ತಯಾರಿಸಿದ ಕಲಾಕಾರನನ್ನು ಈಗ ಸರ್ಕಾರವೇ ಕೆಲಸಕ್ಕೆ ನೇಮಿಸಿಕೊಂಡಿದೆ ಎನ್ನುವುದು ಶುದ್ಧ ಸುಳ್ಳು.

*   *   *   *

ರಾಷ್ಟ್ರಭಾಷಾ ವಿಚಾರದಲ್ಲಿ ಅಭಿಪ್ರಾಯ ಸಂಗ್ರಹಣೆ ಮಾಡಲೋಸುಗ ಅ. ಭಿ. ಮಾಜಿ ಮಂತ್ರಿಗಳ ಸಭೆಯನ್ನು ಏರ್ಪಡಿಸಬೇಕೆಂಬ ಸಲಹೆಯು

—ಅಷ್ಟು ಜನರನ್ನು ಹಿಡಿಸುವ ಮಂದಿರವು ಇಲ್ಲದಕಾರಣ, ಕಾರ್ಯಗತ ವಾಗಲಿಲ್ಲವಂತೆ.

*   *   *   *

ಬಾಲಿ ದ್ವೀಪದಲ್ಲಿ ಮೊನ್ನೆ ಮೊನ್ನೆ ಜ್ವಾಲಾಮುಖಿಯು ಬೇಗಿತಲ್ಲಾ ! ಅದನ್ನು ನೋಡಿದ ಮೊದಲಿಗ, ಅಯ್ಯಯ್ಯೋ ! ಜ್ವಾಲಾಮುಖಿ ನಮ್ಮ ಅತ್ತೆ ತರಹ ಉರಿದು ಬೀಳ್ತಾ ಇದೆ ಎಂದು ಕೂಗಿಕೊಂಡು ಓಟ ಕಿತ್ತನಂತೆ.

*   *   *.   *

'ಲಂಚಾವತಾರ' ನಾಟಕ ನೋಡುವುದಕ್ಕೆ ಹೋದರೆ, ಅಲ್ಲಿನ ಜನ ಸಂದಣಿ ಯನ್ನು ಕಂಡಾಗ, ಇಲ್ಲಿ ಟಿಕೇಟ್ ತೊಗೊಳ್ಳುವುದಕ್ಕೂ ಲಂಚ ಕೊಡಬೇಕಾಗು ತ್ತದೋ ಅನ್ನಿಸುತ್ತದೆ.

*   *   *   *

ಬಿಸಿಲುಮಳೆ ಬಿತ್ತು ಎಂದೊಬ್ಬರು ಹೇಳಿದ್ದಾರೆ. ಅಂದರೆ ಚೀಣೀ ಪಾಕಿ ಸ್ತಾನದ ಮದುವೆ ಅಂತಿರಬಹುದು !

*   *   *   *   *

ಲಾವೋಸಿನಲ್ಲಿ, ಚೀಣಾವು ರಷ್ಯಾದ ಎದುರು ಬಿದ್ದು ಗುದ್ದಾಡುತ್ತಿದೆಯೇ ಹೊರತು, ಲಾವೋಷಿಯನ್ನರಾದ ಮೂರೂ ರಾಜಕುಮಾರರುಗಳಲ್ಲ! ಎಂದನ್ನು ವುದು ಸತ್ಯಾಂಶದಿಂದ ತುಂಬಿದ್ದಾದರೂ ಕುಹಕವೇ !

*   *   *   *

ಕೂಪರ್ ಅವರು ೨೨ ಸಲ ಭೂಪ್ರದಕ್ಷಿಣೆಯನ್ನು ಯಶಸ್ವಿಯಾಗಿ ಮಾಡಿದ ರಂತೆ.

—ನಮ್ಮಲ್ಲಿ, ನೋಡಬಾರದ್ದನ್ನು ಆಕಸ್ಮಿಕವಾಗಿ ನೋಡಿದವರೇ ಭೂಪ್ರ ದಕ್ಷಿಣೆ ಮಾಡುತ್ತಿದ್ದರು. ಅಂದರೆ ೨೨ ಸಲ ನೋಡಬಾರದ್ದನ್ನು ?

*   *   *   *

ಕಾಲ, ಬೆಂಗಳೂರಿನಲ್ಲಿ, ಖಂಡಿತವಾಗಿ ಕೆಟ್ಟುಹೋಯಿತು. ಟ್ಯಾಕ್ಸಿಯವ ನೊಬ್ಬ, ಮೀಟರಿನಲ್ಲಿ ತೋರಿಸಿದ ಹಣವನ್ನು ಮಾತ್ರ ತೆಗೆದುಕೊಂಡು, ವಂದನೆ ಹೇಳ ನಗ್ತಾ ಹೊರಟುಹೋದನಂತೆ

ಶ್ರೀ ಬಹಿರಂಗ ಪತ್ರ ಶ್ರೀ

೧೪ ಕ್ಯಾರಟ್ ಅಪ್ಪಟ ಸುವರ್ಣ ಸಚಿವ ಮೊರಾರ್ಜಿಯವರಿಗೆ

ನಾಯಕರೆ,

ಚಿನ್ನದ ಕಳ್ಳಸಾಗಾಣಿಕೇನ ನಿಲ್ಲಿಸಲು ತಾವು ಎಷ್ಟೋ ಶ್ರಮ ವಹಿಸಿ, ಕಾನೂನುಗಳನ್ನು ರಚಿಸಿ, ವದ್ದ್ಯಾಡ್ತಾ ಇದ್ದೀರಿ.

ಕಳ್ಳನ್ನ ಹಿಡಿಯುಕ್ಕೆ ಕದೀಮರನ್ನು ನೇಮಿಸಿ, ಎಂಬ ಹಿರಿಯರ ಅನುಭವೋಕ್ತಿಗೆ ತಕ್ಕಂತೆ ತಾವು, ಚಿನ್ನ ನಿಯಂತ್ರಣ ಮಂಡಲಿಯನ್ನು ರಚಿಸಿದ್ದೀರಿ. ನ್ಯಾಯವಾಗಿ ಇದು ಫಲ ಕೊಡಬೇಕಾಗಿತ್ತು. ಆದರೆ ವಾಸ್ತವವಾಗಿ ಹಾಗೆ ಆಗಲಿಲ್ಲ. ಅದಕ್ಕೇ ಈ ಕಾಗದ ಬರೀತಿದ್ದೀನಿ.

ಹಿಂದೊಮ್ಮೆ ಇಂಗ್ಲೆಂಡಿನಲ್ಲಿ ನಾಲ್ಕನೆ ಚಾರ್ಲ್ಸ್ ಚಕ್ರವರ್ತಿಯ ಕಾಲದಲ್ಲಿ ಇಂತಹ ಪ್ರಸಂಗ ಒದಗಿತ್ತು. ಒಡವೆ ವಸ್ತುಗಳನ್ನು ಹೇರಳವಾಗಿ ಹೊತ್ತು ಮೆರೆಯುತ್ತಿದ್ದ ಗಂಡು ಹೆಣ್ಣುಗಳು ಆಗ ಸಮಾಜದಲ್ಲಿ ಹೆಚ್ಚಾಗಿದ್ದವು. ಅನ್ಯಾಯವಾಗಿ ಹೀಗೆ ಹಣ ಪೋಲಾಗುತ್ತೆ, ಅದನ್ನು ತಪ್ಪಿಸಬೇಕು ಅಂತ ಚಕ್ರವರ್ತಿ ಒಂದು ಫರ್ಮಾನ್ ಹೊರಡಿಸಿದ. ಯಾರೂ ಕೂಡ ತುಂಬಾ ಬೆಲೆಯ ಒಡವೆಗಳನ್ನು ಹಾಕಿಕೊಳ್ಳಬಾರದು ಅಂತ.

ನೀವು ಹೊರಡಿಸಿರುವ ಕಾನೂನು ಫರ್ಮಾನುಗಳಿಗೆ ಯಾವ ರೀತಿ ಅಪಯಶಸ್ಸು ದೊರಕಿದೆಯೋ, ಅದೇ ರೀತಿ ಚಕ್ರವರ್ತಿಯ ಫರ್ಮಾನಿಗೂ ಅವಮಾನ ಆಯಿತು. ಆಗ ಚಾರ್ಲ್ಸ್ ಯೋಚಿಸಿದ, ಇನ್ನೊಂದು ಫರ್ಮಾನ್ ಹೊರಡಿಸಿದ. ಸೂಳೆಯರು, ಮತ್ತು ಆ ತೆರನ ಒಡಲ ವ್ಯಾಪಾರ ಮಾಡುವವರು ಮಾತ್ರ ತಮ್ಮ ಕಸುಬಿನ ಸಲುವಾಗಿ, ಬೆಲೆ ಬಾಳುವ ಒಡವೆ ಧರಿಸಬಹುದು ಸಾರ್ವಜನಿಕವಾಗಿ ಮೆರೆಸಬಹುದು ಎಂದು.

ಆಗ ಅವನು ಹೊರಡಿಸಿದ ಮೊದಲ ಕಾನೂನು ಯಶಸ್ವೀ ಫಲವನ್ನು ಗಳಿಸಿತು.

ಯಾಕೆ ಹೇಳುಕ್ಕೆ ಬಂದೆ ಅಂದರೆ, ನಿಮಗೂ ಚಾರ್ಲ್ಸ್ ದೊರೆಗಿಂತ ಹಠ ಏನೂ ಕಡಿಮೆ ಇಲ್ಲ. ಅವನ ಹಾಗೇ ನೀವೂ ಸೂಳೆಯರು ಮತ್ತು ಅಂತವರು ಮಾತ್ರ ೨೨ ಕ್ಯಾರಟ್ ಒಡವೆಗಳನ್ನು ಧರಿಸಬಹುದು ಎಂದು ಕಾನೂನು ಹೊರಡಿಸಿದರೆ, ಕೃತಕೃತ್ಯರಾಗಬಹುದೇನೋ ಅನ್ನಿಸಿತು ಅದಕ್ಕೇ ಬರೆದೆ.

ನಿಮ್ಮ ಶ್ರೇಯೋಭಿಲಾಷಿ,

ಸಾಪಿ.

ಲೀಲಾವತಿ

[ಸುಮಾರು ಒಂದೂವರೆ ಎರಡು ವರ್ಷಗಳ ಹಿಂದಿನ ಸುದ್ದಿ ಮದ್ರಾಸ್ ಸೈನ್ಸ್ ಗ್ರೂಪಿಗೆ ಕಾರ್ಯರಂಗವಾದ ಒಂದು ಕೋಣೆಯಲ್ಲಿ ನಸುಗತ್ತಲು ಹಬ್ಬಿತ್ತು. ಮೂಲೆಯಲ್ಲಿ ಒಂದು ಬೀರು; ಅದರ ಎದುರುಕಡೆ ಬಕ್ಕ ತಲೆಯ ಸುಲೋಚನ ಧಾರಿಯಾದ ಒಬ್ಬನು ಮಂಡಿಗಳನ್ನೂರಿ ಕೈಗಳನ್ನು ಮೇಲೆತ್ತಿ ಕುಳಿತಿದ್ದಾನೆ. ಪ್ರೇಕ್ಷಕರು ಅವನ ಮುಖವನ್ನು ನೋಡುವ ಹಾಗಿಲ್ಲ. ಆದುದರಿಂದ ಆತನು ಪ್ರೊ. ಜಿ. ಎನ್ ರಾಮಚಂದ್ರನ್ ಎಂಬುದು ಖಚಿತವಾಗುವಂತಿಲ್ಲ. ಅವ್ಯಕ್ತಿ ಹೀಗೆಂದು ಕಾವ್ಯ ಗಾಯನದಲ್ಲಿ ತೊಡಗುತ್ತಾನೆ:]

ಪ್ರೋಟೀನಿನ ಕಣರಚನೆಯ ಲೆಕ್ಕವೂ ಬಹು ಭಾರ
ಸೀರೀಸಿನ ಸಮ್ಮಿಂಗ್ ಅಪ್ ಸಾಗರ ದುಸ್ತಾರ
ಕಂಪ್ಯೂಟರು ನನಗೆಲ್ಲಿದೆ ಓ ದುರ್ಗತಿ ತ್ರಾತೆ
ಲೀಲಾವತಿ ನೀನೇಗತಿ ಸುಖಸಂಪದ ದಾತೆ —೧

ಇಂದು ಸಿಂಹ ನಾಳೆ ಕೀಟ ಭೌತಶಾಸ್ತ್ರದಲ್ಲಿ
ಮೂಲಕಣದ ಚಲನಸೂತ್ರ ಸಿಗುವ ಪರ್ವದಲ್ಲಿ
ಜಲಜನಕದ ಬುದ್ಬುದಗಳ ಕೋಶವಂತು ಕನಸು
ಜೀ ಟಪಿಲ್ಲ, ಲೇಸರಿಲ್ಲ ನೀನೊಬ್ಬಳೆ ನನಸು —೨

ರೊಕ್ಕವಿಲ್ಲ ಬುಕ್ಕು ಇಲ್ಲ ಸಂಶೋಧನೆಯೆಂತು
ಸಿಕ್ಕ ಇದೇ ಕೋಣೆಯಲ್ಲಿ ಪಟ್ಟುಹಿಡಿದು ಕುಂತು
ಇಡ್ಲಿ ಹೊಡೆದು ಕಾಫಿ ಕುಡಿದು ಬಹುಚಿಂತೆಯಮಾಡೆ
ಲೀಲಾವತಿ ನಿನ್ನ ರಚನೆ ಮನಸಿನೊಳಗೆ ಮೂಡಿ —೩

ಕಂಡುಬಂತು ನಾನು ನಿಂತು ಹಾ ಊಹಾ ಎಂದೆ
ಅಲ್ಲಾಡಿಯ ಕರೆದು ತಬ್ಬಿ ನೋಡು ಸಿಕ್ಕಿತೆಂದೆ
ಕೊಲ್ಲಾಜನ್ನ ಕಣರೂಪವ ಕೆಲವು ದಿನಕೆ ತಂದೆ
ಹೇಗೊ ಏನೊ ಕೀರ್ತಿ ಭವನದೆದುರು ಹೋಗಿ ನಿಂದೆ —೪

[ಅಷ್ಟುಹೊತ್ತಿಗೆ ದಿವ್ಯ ಸುಂದರಿಯೂ ದಿವ್ಯ ಜ್ಞಾನಿಯೂ ಆದ ಒಬ್ಬ ತರುಣಿಯ ರೂಪು ಭಾವಣಿಯ ಬಳಿ ಸುಳಿದ ಹಾಗಾಗುತ್ತದೆ. ಗಾಯಕ ಮೆಲ್ಲನೆ ತಲೆ ತಗ್ಗಿಸಿ ಕೆನ್ನೆಗಳನ್ನು ತಟ್ಟಿಕೊಂಡು ದೀರ್ಘ ದಂಡ ನಮಸ್ಕಾರ ಮಾಡಿ, ಮುಖವನ್ನು ಮೇಲೆತ್ತಿ, ಕೈಗಳನ್ನು ಮುಗಿದು ಹೀಗೆನ್ನುವನು]

ಬಿಂಬಾಧರೆ ಸುಮನೋಹರೆ ಲಾವಣ್ಯ ಲತಾಂಗಿ
ಗಣಿತ ವಿದಿತೆ ಪದ್ಯ ಮುದಿತೆ ವಿಜ್ಞಾನ ವ್ರತಾಂಗಿ
ಭಾಸ್ಕರಾರ್ಯ ಪುತ್ರಿ ಚಾರು ಗಾತ್ರಿ ನಿನ್ನ ಹೆಸರು
ಈ ಪೆಡಾರಿಗಿಟ್ಟೆ ಕ್ಷಮಿಸು ಮರೆತು ಮನದ ಕಸುರು —೫

—ಕವಿಕುಲಲಾಮ.

ಮಲ್ಲೇಶಿ ಮತ್ತು ಕುಂಗ್-ಲಿ-ಪ್ರೋ

(ಮುಂದುವರಿದುದು)

ಮಲ್ಲೇಶಿಯ ತಾಯಿ ಕೇಳಿದ ಪ್ರಶ್ನೆಯಿಂದ ನಾನು ಪೇಚಾಟಕ್ಕೆ ಬಿದ್ದೆ. ಉತ್ತರ ಹೇಳಲು ತಿಳಿಯಲಿಲ್ಲ 'ನನ್ನ ಮಗನ್ನ ಏನ್ಮಾಡಿದ್ರೀ?' ಎಂದಿತು ಮುದುಕಿ. ನಿನ್ನ ಮಗ ನೆಗೆದ ಎಂದು ಹೇಳಲೇ, ಹೇಳಿವರೆ ನನ್ನ ಗತಿ ಏನಾದೀತು? ಮಲ್ಲೇಶಿ ಕೆಲವು ಕಾಲ ನನ್ನ ಸ್ನೇಹಿತನಾಗಿದ್ದನೇ ಹೊರತು ಅವನ ಮನೆಯಲ್ಲಿ ನನ್ನ ಪರಿಚಯು ಯಾರಿಗೂ ಇರಲಿಲ್ಲ.

'ಸಕ್ರೆ ಖರೀದಿಗೆ ಹೊಸಪೇಟೆಗೆ ಹೋಗಿದ್ದಾನೆ' ಎಂದೆ.

'ಅದು ಸುಳ್ಳು. ತಮಾ ಸುಳ್ಳಾಡ್ಬ್ಯಾಡ ನಿಜ ಹೇಳು' ಎಂದಿತು ಮುದುಕಿ.

'ಅಜೀ, ನಿಜ ಹೇಳಿದ್ರೆ ಕೇಳರ‍್ಯಾರು? ನಿಜ ಹೇಳೀ ಕಾಶ್ಮೀರದಗೆ ನಾವು ಕಳ್ರಾಗ್ಯದಿವಿ ನಮ ಕುತಿಗ್ಗೆ ಬಂದತ್ರೋ ಅಂತ ಬಡ್ಕಂದ್ರೂ ಡೀನ್ ರಸ್ಕ್ ಒಪ್ಪ ಹಂಗಿಲ್ಲ'

'ಅವ್ನ್ಯಾರ‍್ರೀ? ನಿಮ್ಮ ಕುತಿಗ್ಗೇನ್ಬಂದತೆ?'

'ಚೀಣಾದರ‍್ದು ಕಡ್ಡಿ ಭಾರೀ ಆಗ್ಯತಜ್ಜಿ'

'ಎಲ್ಲೈತೆಪ್ಪ ಅದು?'

'ಅದ್ರ ಸುದ್ದಿ ಕಟ್ಗಂಡೇನಜ್ಜೀ. ನಮ್ಮನ್ಯಗೆ ನನ ಹೆಂಡ್ತಿ ನಾನೇನಾದೆನೋ ಅಂತ ಹೆದರ‍್ಯದಳೆ ನನಗೇನಾಗ್ಯತೆ? ಏನೂ ಇಲ್ಲ ಹಂಗೇನೇ, ನೀನು ಹೆದ್ರಿರದು'

ಫೋನ್ ರಿಂಗಾಯಿತು ರಿಸೀವರ್ ಎತ್ತಿದೆ. 'ಹಲೋ ಯಾರು?' ಎಂದೆ.

ಅಜ್ಜಿ 'ಯಾರಪ್ಪ ಅದು ಡೀನ್ ರಸ್ಕೇ?'

'ಡೀನ್ ರಸ್ಕು ಇಲ್ಲ ಮಲಿನೋವ್‌ಸ್ಕಿನೂ ಇಲ್ಲ ಸ್ವಲ್ಪ ಸುಮ್ನಿರಜ್ಜೀ'

'ಏನ್ಮಲ್ಲಣ್ಣ ಇಲ್ಲ ಅಂದ್ಯಾ? ಏನಾತಂತೇ? ಅಯ್ಯೋ ನನ್ನಣೇಬರಾನೇ ಓಡಿಹೋದ್ನೇನಪ್ಪಾ?'

'ಓಡಿಹೋಗಿಲ್ಲ ಸ್ವಲ್ಪ ಸುಮ್ನಿರಜ್ಜಿ' ಎಂದೆ

ಈಚೆಕಡೆ ಫೋನಿನಲ್ಲಿ ಹೊಸಪೇಟೆಯ ಆಸಾಮಿ ಬಿಹಾರದಲ್ಲಿ ಕಬ್ಬಿನಬೆಳೆ ಬಹಳ ಕಡಿಮೆಯಂತೆ ಎನ್ನುವ ವಿಶೇಷವಾರ್ತೆಯನ್ನು ಮಲ್ಲಣ್ಣನಿಗೆ ಹೇಳಲಾರಂಭಿಸಿದ್ದ. ಅಲ್ಲದೆ ಹೊಸ ಬಡ್ಜೆಟ್ಟಿನಲ್ಲಿ ಮುಂದಿನ ಏಪ್ರಿಲ್ಲಿಗೆ ಸಕ್ಕರೆಗೆ ಎಕ್ಸೈಸ್ ಡ್ಯೂಟಿ ಹಾಕಬಹುದೆಂಬ ರೂಮರ್ ಇತ್ತಂತೆ.

ನಾನು 'ಹಲೋ ಸ್ವಲ್ಪ ಕೇಳ್ರೀ ಮಲ್ಲಣ್ಣ ನಿಮ್ಮಲ್ಲಿಗೆ ಬಂದಿದ್ದನೇ?'

ಇಲ್ಲ ಬಂದಿಲ್ಲ ಎಂದನವ. ನೀವು ಮಲ್ಲಣ್ಣ ಅಲ್ಲದಿದ್ರೆ ಇಷ್ಟು ಹೊತ್ತಿನಲ್ಲಿ ಅಂಗಡಿಯಲ್ಲೇನು ಮಾಡುತ್ತಿದ್ದೀರಿ ಎಂದು ಕೇಳಿದನವ, ನಾನು ರಿಸೀವರನ್ನು ಕೆಳಗೆ ಕುಕ್ಕಿದೆ.

ಅಜ್ಜಿಯನ್ನು ಮನೆಗೆ ಕಳುಹಿಸಿ, ಮನೆಗೆ ಹೋಗಿ ನಾನು ಇನ್ನೂ ಇರುವ ವಿಷಯವನ್ನು ತಿಳಿಸಿ ಘೂರ್ಕಾ ತಂದಿದ್ದ ಪೆಟ್ಟಿಗೆಯನ್ನು ಪೋಲೀಸ್ ಅಧಿಕಾರಿಗಳಿಗೆ ತಲುಪಿಸುವ ಹಂಚಿಕೆ ಹಾಕಿದ್ದೆ.

ಅಜ್ಜಿ, ಮನೆಗೆ ಹೋಗಲು ಒಪ್ಪಲಿಲ್ಲ. ಸೆಕೆಂಡ್ ಷೋ ಮುಗಿದು ಜನಗಳು ಆಗಲೇ ಮನೆಗೆ ಹೋಗಿದ್ದರು.

'ಅಜ್ಜೀ, ನೀನು ಇಲ್ಲೇ ಕುಂತ್ಗಂಡ್ರೆ ನಿನ್ಮಗನ್ನ ನಾನ್ಹೆಂಗ್ ಹುಡುಕ್ಲೀ, ಚೀಣಾ ದೇಶ್ದಗ್ಹಂಗೆ ಅಂತ ಗೊತ್ತತೇ! ಅಲ್ಲ ಮನೇನೇ ಇಲ್ಲ, ಮಕ್ಳೆಲ್ಲಾ ದಂಡು ಸೇರ್ಬೈಕು.

'ಮುದುಕ್ರ ಗತಿಯೇನ್ತಮಾ?'

'ಮುದುಕ್ರೆಲ್ಲಾ ಫನಾ ಬರ್ ಫನಾ'

'ನರ ರಾಕ್ಷಸ್ರು ತಗಿ. ಅಲ್ತಮಾ, ಮಾತೆತ್ತಿದ್ರೆ ಚೀಣಾದಗೆ ಹಂಗೆ ಹಿಂಗೆ ಅಂತಿಯಲ್ಲೋ ಯಾಕೆ?'

'ನೋಡಜೀ ನಂಗೇನು ಚೀಣಾ ಮಾತಾಡಕ್ಕೆ ಆಶಿಲ್ಲ. ಏನ್ಮಾಡನ, ಸುಂಕಿದ್ವರ ಮೈಮ್ಯಾಲೆ ಬೀಳ್ತರಲ್ಲ ಅವರೆಷ್ಟ್ ಹುಶಾರಿ ನಾವು ಎಷ್ಟ್ ಮಬ್ಬಿನಗೆ ಅದೀವೀ ಅಂತಾ ಹೊಟ್ಟೆ ಉರಿತತೆ'

ಅಷ್ಟರಲ್ಲಿ ಬಾಗಿಲು ತೆಗೆದು ಘೂರ್ಕಾ ಒಳಗೆ ಬಂದ ಬಂದವನೇ ನನ್ನ ಮೂಗಿಗೆ ಒಂದು ಬಾರಿ ಗುದ್ದಿದ ಅಜ್ಜಿ ಚೀರಿದ ಸದ್ದು ಕೇಳಿಸಿತು. ಕಣ್ಣು ಕತ್ತಲೆಗೂಡಿಸಿತು.

ಎದ್ದು ನೋಡಿದಾಗ ಅಜ್ಜಿ ನನಗೆ ಗಾಳಿ ಹಾಕುತ್ತಿತ್ತು. ಟೇಪ್ ರೆಕಾರ್ಡರಿನ ಪೆಟ್ಟಿಗೆ ಮಾಯವಾಗಿತ್ತು.

* * * *

ಮರುದಿನ, ಬೆಳಗಿನ ಹೊತ್ತು ಥಂಡಿ ಸ್ವಲ್ಪ ಕಡಮೆಯಾಗಿತ್ತು. ಮೂಗು ಬಾತುಕೊಂಡಿತ್ತು.

ನನ್ನಾಕೆ ಕೇಳಿದಳು 'ಹಸಿವಿಲ್ಲವೇ? ರಾತ್ರಿ ಬಂದವರು ತಲೆ ತಿರುಗಿ ಬಿದ್ದಿರಲ್ಲಾ ಬಟ್ಟೆಯೆಲ್ಲಾ ರಕ್ತವಾಗಿತ್ತಲ್ಲಾ ಏನು ಮಾಡಿಕೊಂಡಿದ್ದಿರಿ.'

'ಎಲ್ಲಾ ಮೋತ್ಸೆ ಟಂಗನ ವರಪ್ರಸಾದ ಕಣೇ' ಎಂದೇ ಸ್ನಾನ ಮಾಡಿ ತಿಂಡಿ ತಿಂದು ಬಜಾರಿನಲ್ಲೆಲ್ಲಾ ತಿರುಗಾಡಿದೆ. ಎಲ್ಲಾ ಬೆಲೆಗಳೂ ಇಳಿದುಹೋಗಿದ್ದವು. ಮಾಲುಗಳು ಹೇರಳವಾಗಿ ಬಂದಿದ್ದವು. ಗಿರಾಕಿ ಘನವಾಗಿದ್ದವು ದಿನಪತ್ರಿಕೆಗಳನ್ನು ಕೊಳ್ಳುವವರು ಗತಿಯಿರಲಿಲ್ಲ. ಮಲ್ಲೇಶಿ ಅಂಗಡಿ ಮುಂದೆ ಗುಮಾಸ್ತರು, ಹಮಾಲರು

ಕಾದು ನಿಂತಿದ್ದರು. ಬಾಗಿಲು ತೆಗೆದೆ ಈ ದಿವಸ ಏನೂ ವ್ಯಾಪಾರ ಮಾಡಬೇಡಿ ಎಂದು ಹೇಳದೆ ಸಾಹುಕಾರರೆಲ್ಲಿ ಎಂದರೆ ಗೊತ್ತಿಲ್ಲ ಎಂದು ಮಾತ್ರ ಹೇಳಿರಿ ಎಂದೆ ಹೊರಕ್ಕೆ ಹೊರಟೆ ಮಲ್ಲೇಶಿ ಇದುರಿಗೆ ಬಂದ.

* * * *

'ಅಲ್ರೀ ರಾಯ್ರೇ ಬೆಳಗ್ನಿಂದ ಎಷ್ಟು ವ್ಯಾಪಾರ ಮಾಡ್ಯದಿರಿ? ಹತ್ತುಸಾವ್ರ ಕ್ಯಾಷ್ ಬೇಕಲ್ರೀ ನಿಮ್ಮಂಥ ಕೈಯಿಗೆ ಅಂಗ್ಡಿ ಕೊಟ್ರೆ, ಆದ್ಹಂಗೇ, ಶಾ.. ' ಎಂದ ನಗುತ್ತಾ.

'ಮಲ್ಲೇಶಿ, ದೇವ್ರ ದಯಿಂದ ಬದ್ಕಿ ಬಂದ್ಯಾ!'

'ಅವ್ರ ತಾ....ಅಲ್ರೀ ರಾಯ್ರೇ ಹಿಂಗೆ ಹೊಂಟ್ರೆಲ್ಲಾ, ಬರ್ರೀ ಒಳ್ಗೆ'

ಇಬ್ಬರೂ ಒಳಗ್ಗೆ ಹೋಗಿ ಕುಳಿತೆವು 'ಏನಾತಪಾ' ಎಂದು ಕೇಳಿದೆ.

'ರಾಯ್ರೇ ಈ ತಾ ರು ಏನಾಟ ಹೂಡಿದ್ದರ್ರೀ ಇಲ್ಲಿಂದ ಒದ್ದು ಬಡ್ದು ಎಳ್ಕಂಡ್ಹೋದ್ರು ಹತ್ತುಸಾವ್ರ ಕ್ಯಾಷ್ ಬೇಕು ಅಂದ್ರು ಅಲ್ರೋ ಮೊದ್ಲೇ ಹೇಳಿದ್ರೆ ತರ್ತಿದ್ದೆ ಈಗ್ಯಾಕೆ ಕ್ಯಾಷು ಅಂದೆ, ಅದೆಂಥದೋ ಕಾಲಿಂಪಾಂಗಿಗೆ ಕಳ್ಸಬುಕು ಅಂದ್ರು. ನಾಳೆ ಬಂದು ಕೇಳಿದ್ರೆ ಕೊಡ್ತಿದ್ದೆ ಅಂದೆ. ಕಾಲಿಂಪಾಂಗ್ ಅಂದ್ರೇನ್ರಿ? ಅಲ್ಲಿ ನ್ಯೂಸ್ ನಾಕ್ರುಪಾಯಿಗೆ ಮಣ ಇರ್ಬುಕು. ಇಲ್ಲಿ ಆರ್ರುರೂಪಾಯಿಗೆ ಕೊಡ್ತರಲ್ಲ? ಅದೆಲ್ಲಾ ಚೀಣಾದರ ಪ್ರಚಾರ ಪತ್ರಿಕೆಗಳು ಕಣಪಾ ಪುಗ್ಸಟೆ ಬರ್ತವೆ ಅವನ್ನ ಈ ತಾ ರು ಮಾರ್ಕ್ಯಂಡು ತಿಂತರೆ'

'ತಿಳ್ದ್ಹೋತು ಬಿಡ್ರೀ ರಾಯ್ರೇ ಯಾವಾಗ ವ್ಯಾಪು ಚೀಣಾದರ್ನು ಅಂದ್ರ್ಯೋ ಆಗ್ಲೆ ತಿಳ್ಕಂಡೆ.'

'ಈ ನಿಮ್ಮ ಕುಂಗದನಲ್ಲ ಅವನ್ನ ಕೆಲ್ಸದಿಂದ ತಗ್ದ್ ಹಾಕ್ಯದರೆ ಇವ್ನು ನಿನ್ಹತ್ರ ದುಡ್ಡು ಮಾಡ್ಕ್ಯಂಡು ತಲೆ ತಪ್ಪಿಸ್ಗ್ಯಂಬಕ್ಕೆ ನೋಡ್ತಾ ಆದನೆ ಅದಿರ್ಲಿ ನಿನ್ನ ಎಲ್ಲಿಗೆ ಕರ್ಕಂಡು ಹೋಗಿದ್ರು ನಾನು ಏನಾದ್ಯೋ ಏನೋ ಅಂತ ಚಿಂತೆ ಮಾಡ್ಕ್ಯಂತ'

'ಎಲ್ಲೂ ಇಲ್ರೀ ಇಲ್ಲೇ ಚಿಕ್ಕನಳ್ಳಿ ಒಳ್ಗೆ ಒಬ್ಬ ಘೂರ್ಕನ ಮನೆ ಐತೆ. ಕುಂಗ್ ಅವನಿಗೆ ಮಾವಂತೆ'

'ಬರೀ ಸುಳ್ಳು'

'ಸುಳ್ಳೋ ನಿಜವೋ ಅಲ್ಲಿಗೆ ನನ್ನ ಒದ್ಕಂತ ಕರ್ಕಂಡು ಹೋದ್ರು ಹತ್ಸಾವ್ರ ಕೇಳಿದ್ರು ನಾಳೆ ಕೊಡ್ತಿನಿ ಈಗ್ಯಾಕೆ ನನ್ನ ಒದ್ರೀ ಅಂದೆ. ನೀನು ಯಾರು ಅಂತ ಕೇಳಿದ್ರು ನನ್ನ ಸ್ನೇಹಿತ ಎಂದೆ. ಏನು ಕೆಲ್ಸ ಅಂದ್ರು ಸರ್ಕಾರಿ ನೌಕರ ಅಂದೆ ಹೆದ್ರಿಬಿಟ್ರು ಕುಂಗ ಬಂದ್ರೆ ನಮ್ಮನ್ನೆಲ್ಲಾ ತೌಡು ಹರಿತನೆ ಅಂತ ಮಾತಾಡಿರ್ಬೇಕು. ಅವ್ರ ಪೈಕಿ ಒಬ್ಬನು ಬಂದು ಇಲ್ಲಿಟ್ಟ ಪೆಟ್ಟಿಗೆ ತಂದ ಕುಂಗ ಇವತ್ತು ಬೆಳಿಗ್ಗೆ ಬಂದ. ರೂಪಾಯಿ ತರ್ತಿನಿ ಅಂತ ಬಂದೆ ಯಾರಿಗಾದ್ರೂ ಹೇಳಿದ್ರೆ ನನ್ಕಥೆ ಮುಗಿಸ್ತಿವಿ ಅಂತರೆ ಏನ್ಮಾಡನ?"

‘ ಇದಕ್ಕೊಂದೇ ಉಪಾಯ ಮಲ್ಲೇಶಣ್ಣ, ಸೇಲ್ಸ್‌ಟ್ಯಾಕ್ಸ್ ಆಫೀಸರು ನ್ಯೂಸಿನ ಸ್ಟಾಕ್ ಕೇಳಿದ್ರು ಅವರಿಗೆ ಫೋನ್ ಮಾಡಿ ಕುಂಗನ ಸುದ್ದಿ ತಿಳ್ಸಿ ಕುಂಗಂದೇ ಇವೆಲ್ಲಾ ಮಾಲು ಅಂತ ಹೇಳ್ಬಿಡನ ಈ ಊರ ಸಬ್ಬಿನಿಸ್ಪೆಕ್ಟ್ರು ನನಗ್ಗೊತ್ತು. ಅವ್ನಿಂದ ಕುಂಗನ ಮನೆ ಜಪ್ತಿ ಮಾಡಿಸಿ ಅದನ್ನೆಲ್ಲಾ ಮ್ಯಾಲಕ್ಕೆ ಕಳ್ಸಿಬಿಡನ ’


‘ ಸರಿ ನಾನೂ ಹಂಗೇ ಅಂದ್ಕಂಡಿದ್ದೆ ’

ಮುಂದಿನ ಕಥೆ ಹೇಳುವುದು ಬಹಳವಿಲ್ಲ ಆದಿನ ಕುಂಗ ಮತ್ತು ಅವನ ‘ ಅಳಿಯ ’ನ ದಸ್ತಗಿರಿ ಆಯಿತು. ಚೀಣೀ ಪ್ರಚಾರದ ಹಳೇ ನ್ಯೂಸ್‌ಪೇಪರುಗಳು ನಾಶವಾದವು. ಬೆಂಗಳೂರಿನಲ್ಲಿ ಕುಂಗನ ಕಚೇರಿಯ ಮೇಲೆ ದಾಳಿಯಾಯಿತು. ಆದರ ಫಲಶೃತಿ ನಮಗೆ ತಿಳಿಯುವಂತಿಲ್ಲ ಮಲ್ಲೇಶಿ ತನಗೆ ಹಳೇ ಪೇಪರುಗಳಿಂದ ಬಂದ ಲಾಭವನ್ನೆಲ್ಲಾ ರಾಷ್ಟ್ರೀಯ ರಕ್ಷಣಾನಿಧಿಗೆ ದಾನ ಮಾಡಿದ.

ಆ ದಿನ ಸಂಜೆ ಪೋಲೀಸಿನವರಿಂದ ಬೀಳ್ಕೊಂಡು ನಾವಿಬ್ಬರೂ ಬರುತ್ತಿರುವಾಗ ಮಲ್ಲೇಶಿ ‘ ರಾಯ್ರೇ ಈ ವರ್ಸ ಅಕ್ಕಿ, ಜ್ವಾಳ, ಸಕ್ರಿ, ಬೆಲ್ಲ ಈ ನಾಕ್ರ ಪೈಕಿ ಎರಡನ್ನಾರು ಮಾಡ್ಬುಕು ನೋಡ್ರೀ. ಬಂದ್ರೆ ಐವತ್ರುಸಾವ್ರ, ಹೋಗ ಸುದ್ದಿನೇ ಇಲ್ಲ ನಾಳೆ ಅಂಗ್ಡಿ ಹತ್ರ ಬರ್ರೀ ನಮ್ಮ ಅವ್ವನ ಹತ್ರ ಹೋಗಿಬರ್ತ್ತಿನಿ....’ ಎಂದ.

(ಮುಗಿಯಿತು)

—ಅ. ರಾ. ಸೇ.



“ ಇವರು ಹತ್ತುವರ್ಷದ ಹಿಂದೆ ನೀರು ತೊಗೊಂಡೊಗ್ಬೇಕು ಅಂತ ಇಲ್ಲಿಗೆ ಬಂದ್ರು, ಅವತ್ತಿನಿಂದ ಇಲ್ಲೇ ಕೂತಿದಾರೆ ಈಗ ದೊಡ್ಡ ಸ್ವಾಮಿಗಳಾಗಿದಾರೆ”

ಖಯಾಲಿ ಕೆಂಪಣ್ಣ

ಹೊರಬಿತ್ತು ರೈಲು ತುಂಕೂರು ಕಡೆಗೆ. ಗಮ್ಮತ್ತಿನ ಮೇಲೆ ಮುಕ್ಕಾಲು ಇಂಚು ಜರಿ ಪೇಟದ ಹುರಿಮೀಸೆ ಯಜಮಾನ್ರು ಥರ್ಡ್‌ಕ್ಲಾಸ್ ಗಾಡಿಯಲ್ಲಿ ಕೂತಿದ್ರು. ಆ ಗಾಡಿಯೇ ಮುದುಡಿಕೊಂಡಿತ್ತು ಎಲಾ! ಇಂಥಾ ಭಾರೀ ಏರೋಪ್ಲೇನ್ ಏರೋ ಗಿರಾಕಿ ಕೇವಲ ಮೂರನೆ ತರಗತಿ ಡಬ್ಬಿ ಸೇರಿದ್ದಕ್ಕೆ ನಾಚಿಕೊಂಡಿತ್ತು.

ಇಸಮು ತೇಗಿತು ನನಗೇನು ಟಿಕೆಟ್ ಎಂದೆ ನನ್ನ ಕೆಲಸವೇ ಟಿಕೆಟ್ ಕಲೆಕ್ಟರದು ಅಂದಮೇಲೆ ಕೇಳಬೇಡವೆ? ಇಸಮು ತೆಗೆದು ಕೊಟ್ಟ ಫಸ್ಟಕ್ಲಾಸ್ ಟಿಕೆಟ್ಟು!!.... ನಾನು ಕೆಳಗೇ ಮೇಲೆನೋಡಿ "ಇದು ಫಸ್ಟಕ್ಲಾಸ್ ಅಲ್ಲ" ಎಂದೆ.

"ಹಾಗಾದರೆ ಮಿಕ್ಕ ದುಡ್ಡು ರಿಫಂಡ್ ಮಾಡಿ" ಅಂತ ಅಂದ ಆ ಇಸಮು.

"ಹಾಗಾಗೋಲ್ಲ....ನೀವು ೧ ಕ್ಲಾಸಿಗೇ ಹೋಗಿ ಕೂಡ ಬಹುದು" ಎಂದು ಸೂಚಿಸಿದೆ.

"ಅಲ್ಲ ನನ್ನ ಆಳು ಕೂತಿದ್ದಾನ್ಲಾ" ಎಂದ.

"ಅವನ ಹತ್ತಿರ ಟಿಕೆಟ್ಟಿಲ್ಲವೊ?"

"ಇರಬೇಕು ಕೇಳಿನೋಡಿ"

"ನೀವು ಇಲ್ಲೆ ಕೂತು ನಿಮ್ಮ ಆಳಿನ ಹತ್ತಿರ ೩ ಕ್ಲಾಸ್ ಟಿಕೆಟ್ಟಿದ್ದರೆ ಅವನು ಡಬ್ಬಲ್ ದುಡ್ಡು ತೆರಬೇಕಾಗುತ್ತೆ"

"ಅವನ್ನ ಕೇಳಿ ನನ್ನೇನು ಕೇಳೀರಿ"

"ಹಾಗಾದ್ರೆ ನೀವು ಇಲ್ಲೇ ಕೂಡುವವರೊ?"

"೧ ಕ್ಲಾಸ್ ಟಿಕೆಟ್ಟು ಕೊಂಡು ೩ ಕ್ಲಾಸಲ್ಲಿ ಕೂಡಬಾರದೂಂತ ರೈಲ್ವೆ ರೂಲ್ಸಿದೆಯೊ"

"ಇಲ್ಲ"

"ಸರಿ ಮತ್ತೆ ಗಾಡಿ ಬಿಡಿ"

ನಾನು ಸುಸ್ತು ಮತ್ತೆ ಆತನೇ ಹೇಳಿದ "ನೋಡಿ ನಾನೇ ಕಂಟ್ರಾಕ್ಟರ್ ಖಯಾಲಿ ಕೆಂಪಣ್ಣ ಚಾಮುಂಡಿ ಬೆಟ್ಟ ಕೆಡವಿ ಸೈಟುಗಳು ಮಾಡ್ತೇನಿ ..."

"ಹೌದೆ! ಹಾಗಾದರೆ ಆ ತೆಗೆದ ಕಲ್ಲು ಮಣ್ಣು?"

"ಅದೇನು ಮಹಾ ಇನ್ನೊಂದು ಗುಂಡಿತೆಗೆದು ಅದರಲ್ಲಿ ಹಾಕೋಕಾಗೋಲ್ಲೆ?"

ಎಂದು ನಕ್ಕಾಗ ಘೊಂ ಎಂದು ಹೊಡೆಯಿತು ಬಾಯಿಂದ ಬಂದ ಬ್ರಾಂಡಿ ವಾಸನೆ ಮುಂದಿನ ಡಬ್ಬಿಗೆ ನಾನು ಹೋದೆ. ತುಂಕೂರು ಡ್ರೈ ಏರಿಯಾ ಅನ್ನೋದು ಮರ್ತಿದ್ರೆ.

—ಬಂಗಾರಯ್ಯ

ಈಗ ಹೇಳಿ ನೀವು

ನಮ್ಮ ಘನ ಸರ್ಕಾರವನ್ನು ಬಾಯಿತುಂಬ ಹೊಗಳಿದೆವು, ನಾವಿಬ್ಬರು ದಂಪತಿಗಳು. ಕಳೆದ 13 ವರ್ಷಗಳಿಂದ ಗಂಡ ನಾನೊಂದು ಊರಿನಲ್ಲಿ ಹೆಂಡತಿ ಇನ್ನೊಂದು ಊರಲ್ಲಿ ಕೆಲಸ ಮಾಡುವ ಹಾಗಾಗಿತ್ತು. ಎಷ್ಟೋ ಸರ್ತಿ ಅಹವಾಲು ಮಾಡಿಕೊಂಡ ಮೇಲೆ ಮೊನ್ನೆ ಮೊನ್ನೆ ನಮ್ಮಿಬ್ಬರನ್ನೂ ಮೈಸೂರಿಗೆ ವರ್ಗ ಮಾಡಿದರು. ಅನುಕೂಲವಾದ ಮನೆಯೂ ಸಿಕ್ಕಿತು. ಅಂದರೆ ಮನೆಯಲ್ಲಿ ಭಾವಿ ಇತ್ತು. ಸೇದಿಕೊಂಡರೆ ನೀರು ಸಿಗುತ್ತಿತ್ತು. ಬೆಂಗಳೂರಿನ ಹಾಗಲ್ಲ ಅಲ್ಲಿ ನಾಲಿಗೆ ಸೇದಿಕೊಂಡರೂ ನೀರು ಸಿಗಬಲ್ಲದು. ಸುಖವಾಗಿ ಸಂಸಾರ ಮಾಡಿಕೊಂಡಿದ್ದೆವು. ಹದಿಮೂರು ದಿವಸ ಆದಮೇಲೆ ಅನ್ನಿಸಿತು ನಾವು ಗಂಡ ಹೆಂಡತಿ ಬೇರೆ ಬೇರೆ ಊರಿನಲ್ಲಿ ವಾಸಿಸೋದೇ ವಾಸಿ. ವರುಷಕ್ಕೋ ಎರಡು ವರುಷಕ್ಕೋ, ಇಬ್ಬರಿಗೂ ಒಟ್ಟಿಗೆ ರಜಾ ಸಿಕ್ಕಿದಾಗ ಯಾವುದಾದರೂ ಊರಿಗೆ ಹೋಗಿ, ಪ್ರವಾಸಿಗಳಂತೆ ಇರೋದೆ ಬಲು ಚೆನ್ನು. ಆಗ ನಮ್ಮಿಬ್ಬರಿಗೂ ಅಚಲವಾದ ವಿಶ್ವಾಸ' ಉಳಿದುಕೊಳ್ಳುತ್ತದೆ ಎನ್ನಿಸಿತು ನನಗೆ. ಯಾಕೆ? ಅಂತೀರೀ? ಒಂದು ದಿನದ ಅನುಭವಾನ ವಿವರಿಸ್ತೀನಿ, ಆಮೇಲೆ ನೀವೇ ತೀರ್ಪು ಕೊಡಿ.

ಇಬ್ಬರೂ ಹತ್ತುಗಂಟೆ ಬೆಳಿಗ್ಗೆ ಊಟಕ್ಕೆ ಕುಳಿತುಕೊಳ್ಳುತ್ತೇವೆ. ಅಡಿಗೆಯವಳು ಮಾಡಿ ಬಡಿಸಿದ್ದನ್ನು ಊಟ ಮಾಡುತ್ತೇವೆ. ಆಮೇಲೆ ಬೈಟಕ್ ಖಾನೆಗೆ ಬಂದು ಕೂತುಕೊಳ್ಳುತ್ತೇವೆ. ಅಷ್ಟು ಹೊತ್ತಿಗೆ ಅಂಚೆಯವನು ಕಾಗದ ತಂದು ಕೊಡುತ್ತಾನೆ. ಎಲಡಿಕೆ ಜಗಿಯುತ್ತಾ ನಮಗೆ ಬಂದ ಕಾಗದಗಳನ್ನು ನಾವು ಓದಿಕೊಳ್ಳುತ್ತೇವೆ. ಹತ್ತೂವರೆಗೆ ಬಸ್ ಬರುವ ಹೊತ್ತು. ಅವಳು ತನ್ನ ಶಾಲೆಗೆ ಹೊರಡುತ್ತಾಳೆ ನಾನು ಎದುರು ದಿಕ್ಕಿನ ಬಸ್ಸಿಗೆ ಕಾದು, ಅರಣ್ಯ ಇಲಾಖಾ ಕಚೇರಿಗೆ ಹೋಗುತ್ತೇನೆ. ಇಬ್ಬರೂ ಹಿಂತಿರುಗುವಾಗ ಸಂಜೆ ಆರುಗಂಟೆಯಾಗಿರುತ್ತೆ. ಇದೇ ನಮ್ಮ ದಿನಚರಿ.

10-12 ದಿನಗಳಾಗಿರಬಹುದು, ಮೈಸೂರಿನಲ್ಲಿ ನಾವಿಬ್ಬರೂ ಒಟ್ಟಿಗೆ ಸಂಸಾರ ಹೂಡಿ ಊಟ ಮಾಡಿ ಬೈಟಕ್ ಖಾನೆಯಲ್ಲಿ ಕೂತಿದ್ದೆವು. ನಾನು ಎಲೆಗೆ ಸುಣ್ಣ ಹಚ್ಚಿ ಬೀಡ ಕಟ್ಟುತ್ತಿದ್ದೆ. ಅಂಚೆಯವನ ಕಾಗದಾನ ಅವಳು ತೆಗೆದುಕೊಂಡು ಬಂದು, "ಯಾರದು ಇರಬಹುದು ಅಂದ್ರೆ, ಈ ಕಾಗದ ಬೆಂಗಳೂರಿಂದ ಬರೆದಿದ್ದಾರೆ" ಎಂದಳು. ನೀನು ಬೆಂಗಳೂರಿಗೆ ಹತ್ತುವರ್ಷಗಳಿಂದ ಹೋಗಿಲ್ಲ. ಅಲ್ಲಿ ನಿನ್ನ ಕಡೆಯವರು ಯಾರೂ ಇಲ್ಲ. ನನಗೆ ತಿಳಿದ ಹಾಗೆ ನಿನ್ನ ಸ್ನೇಹಿತರೂ ಇಲ್ಲ ಎಂದೆ. ಇದಕ್ಕೆ ಯೋಚನೆ ಯಾಕೆ? ಲಕ್ಕೋಟೆ ಒಡೆದು ನೋಡಿದರೆ ಗೊತ್ತಾಗುತ್ತೆ ಎಂದೆ. ಕಟ್ಟಿದ ಬೀಡಾನ ನಾನೇ ಬಾಯಿಗಿಟ್ಟುಕೊಂಡೆ.

"ಲತಾಂಗಿದಿರಬೇಕು ಅಂದ್ರೆ ಕಾಗದ. ಲತಾಂಗಿ ನಮ್ಮ ಜತೆ ಕಾಲೇಜಲ್ಲಿ ಓದ್ದೋವಾಗಲೇ ಟೈಪ್‌ರೈಟಿಂಗೂ ಕಲೀತಾ ಇದ್ದಳು. ಈ ಲಕ್ಕೋಟೆ ಮೇಲಿನ ವಿಳಾಸ ಟೈಪ್ ಮಾಡಿದೆ ಅಂದರೆ ಲತಾಂಗಿ ಕಾಗದಾನೆ ಇರಬೇಕು?" ಎಂದಳು, ಲಕ್ಕೋಟೆಯನ್ನು ಬೆರಳುಗಳಲ್ಲಿ ತಡವರಿಸುತ್ತಾ.

ಲತಾಂಗಿ ಕೊಡಗಿನಲ್ಲಲ್ವೇನೆ ಇರೋದು, ಇದು ಬೆಂಗಳೂರು ಕಾಗದ ಅಂತ ಮುದ್ರೆ ನೋಡಿ ಹೇಳಿದೆ, ಇದಕ್ಕೆ ಯಾಕೆ ಯೋಚನೆ? ಲಕ್ಕೋಟೆ ಒಡೆದು ನೋಡ ಬಾರದೆ ಅಂತ ಹೇಳುತ್ತಾ ಇನ್ನೊಂದು ವೀಳೆಯದೆಲೆಗೆ ಸುಣ್ಣ ಹಚ್ಚುಕ್ಕೆ ಶುರು ಮಾಡಿದೆ.

"ಬೆಂಗಳೂರಿಗೆ ಹೋಗೋ ಅಂತಹ ಕಾಯಿಲೆ ಏನು ಬಂದಿರಬಹುದು, ಲತಾಂಗಿಗೆ? ಗಟ್ಟಿ ಮುಟ್ಟಾಗ್ತಾ ಇದ್ದಳಲ್ಲ! ಅಲ್ಲಾ ಅಂದ್ರೆ ಕಾಯಿಲೆ ಬಿದ್ದಿರೋಳು ಟೈಪ್ ಒತ್ತಿ ಕಾಗದ ಬರೀತಾಳೇನ್ರೀ" ಎಂದಳು.

ನನಗ್ಯಾಕೋ ಸ್ವಲ್ಪ ಬೇಸರ ಬಂದಿತು. ಕಾಗದ ಒಡೆದು ನೋಡಿದರೆ ಆಗದೆ? ಇದ್ಯಾಕೆ ಈ ಚೆಲ್ಲಾಟ ಅನ್ನಿಸಿತು. ಸಂಪಾದಿಸೋ ಹೆಂಡತಿಯು ಗಂಡನ ಕೋಪ ವೀಳೆಯದೆಲೆ ಮೇಲೆ! ಇನ್ನೊಂದು ವರಸೆ ಸುಣ್ಣ ಹಚ್ಚಿದೆ ಉತ್ತರ ಕೊಡಲೇ ಇಲ್ಲ.

ಇನ್ನೊಂದು ಸರ್ತಿ ಲಕ್ಕೋಟೇನ ತಿರುಗ ಮುರುಗ ಮಾಡಿ ನೋಡಿದಳು. ಇಲ್ಲಾ ಅಂದ್ರೆ! ಇದು ಶ್ಯಾಮಲಾಳ ಕಾಗದ ಇರಬೇಕು ಅಂದ್ರೆ ಅಂದಳು.

ಎಲೆಯ ಮೇಲೆ ಅಡಿಕೆ ಚೂರು ಪೇರಿಸ್ತಾ ಇದ್ದೆ ಅವಳಂದದ್ದು ಕೇಳಿ ನಗುಬಂತು. ಶ್ಯಾಮಲಾ ಇವಳ ಸ್ನೇಹಿತೆ ದಿಟ ಆದರೆ ಅದು ಎ ಕ್ಲಾಸ್ ಬಿ ಕ್ಲಾಸ್ ಗಳಲ್ಲಿ ಆಮೇಲೆ ಶ್ಯಾಮಲಾ ಹಳ್ಳೀಲೆ ಉಳಕೊಂಡಿದ್ದಳು ಇಂಗ್ಲೀಷು ಕಲೀಲೇ ಇಲ್ಲ. ಅವಳು ಹ್ಯಾಗೆ ಟೈಪ್‌ಮಾಡಿ ಕಾಗದ ಕಳಿಸಿರ್ತಾಳೆ? ಗಹಗಹಿಸಿ ನಾನು ನಕ್ಕಿದ್ದು ಕಂಡು ಅವಳಿಗೂ ಅನುಮಾನ ಬಂದಿರಬೇಕು.

"ತಿಳಿಯೋದು! ಶ್ಯಾಮಲಂಗೆ ಇಂಗ್ಲೀಷು ಬರುಲ್ಲ ಅಂತ. ಆದರೆ ಅವಳ ಗಂಡ ಈಗ ಸಚಿವರಾಗಿರೋದು ನಿಮಗೆ ಮರೆತುಹೋಗಿದೆ ಅಂತ ಕಾಣುತ್ತೆ. ಅವರು ಬರೆದಿರಬಹುದು ಎಂದಳು.

"ಅಲ್ಲಾ ಕಣೆ! ಅವಳ ಗಂಡನಿಗೂ ಇಂಗ್ಲೀಷು ಬರುಲ್ಲ ಕಣೆ! ಆದ್ದರಿಂದ ಅವನು ಬರೆದಿರಲಾರ ಅವನ ನೌಕರನ ಹತ್ತಿರ ಬರೆಸಿರಬಹುದು ಒಪ್ಪಿದೆ. ಆದರೆ ಸಚಿವನ ಹೆಂಡತಿಯಾದೋಳು ಅಟ್ಟದ ಮೇಲೆ ಕೂತಿರೋದು ಬಿಟ್ಟು ಮ್ಯಾಡಂ ಆಗಿ ಶಾಲೇಲಿ ದುಡಿಯೋ ನಿನಗೆ ಕಾಗದ ಯಾಕೆ ಬರೀತಾಳೆ" ಎಂದು ಹೇಳಿ ಇನ್ನೊಂದು ಎಲೇನ ಮೊದಲ ಎಲೆ ಸುತ್ತ ತೊಡಿಸಿದೆ.

"ಹೌದು ಅಂದ್ರೆ ಶ್ಯಾಮಲಾ ಕಾಗದಾನ ಬರೆಸಿದ್ದರೆ, ಸ್ಟಾಂಪ್ ಯಾಕೆ ಹಾಕ್ತಾ ಇದ್ದ, ನೌಕರ. ನೀವು ಅಂದಿದ್ದೆ ದಿಟ, ಅವಳದಲ್ಲಾ" ಎಂದು ನಿಟ್ಟುಸಿರು ಬಿಟ್ಟಳು.

ಒಡೆದು ನೋಡಬಾರದೇನೆ ಎಂದೆ.

ಒಡೆದಳು ನೋಡಿದಳು ನಕ್ಕಳು.

ಅಯ್ಯೋ! ಇದು ನಿಮ್ಮ ಕಾಗದ ಅಂದ್ರೆ ಸುಮ್ಮನೆ ನಾನು ಒದ್ದಾಡಿದೆನಲ್ಲ ಎಂದಳು. ಕಾಗದ ಇಸುಕೊಂಡು ನೋಡಿದೆ. ಒಂದು ಹೊಸ ಸೀರೆ ಕೊಂಡ ಬಾಬತು ಎಪ್ಪತ್ತು ರೂಪಾಯಿ ಬೇಗ ದಯವಿಟ್ಟು ಪಾವತಿ ಮಾಡಿ ಎಂದು ಬೆಂಗಳೂರಿನ ಜವಳಿ ಅಂಗಡಿಯೊಂದರಿಂದ ನನ್ನ ವಿಳಾಸಕ್ಕೆ ಬಂದಿತ್ತು ಆ ಪ್ರೇಮ ಪತ್ರ.

ಯಾವ ಹೊಸ ಸೀರೇನೆ? ನಾನು ಕೊಂಡುಕೊಂಡಿಲ್ಲವಲ್ಲೇ? ಬೆಂಗಳೂರಿಗೆ ಹೋಗೆ ಇತ್ತಿಲ್ಲವಲ್ಲೇ ಎಂದು ಗೋಗರೆದೆ.

ಇದೇ ಸೀರೆ ಅಂದ್ರೆ. ಈಗ ನಾನು ಉಟ್ಟಿರೋ ಸೀರೇನೆ ಅಂದ್ರೆ ಮೊನ್ನೆ ಪೇಟೇಬೀದೀಲಿ ಬರ್‍ತಿದ್ದಾಗ ಹೊಸ ಜವಳಿ ಅಂಗಡೀನ ಯಾರೋ ಉದ್ಘಾಟಿಸುತ್ತಾ ಇದ್ದರು ಏನಿದೆ ನೋಡೋಣ ಅಂತ ಹೋಗಿ, ನಿಮ್ಮ ವಿಳಾಸ ಕೊಟ್ಟೆ. ಅವರು ಸೀರೇನ ಕಟ್ಟಿಕೊಟ್ಟರು. ಬೆಂಗಳೂರಿನ ಅಂಗಡಿಯೋರು ಈ ಊರಲ್ಲಿ ಬ್ರಾಂಚ್ ತೆಗೀತಾರೆ ಅಂತ ತೋಚಲೇ ಇಲ್ಲ ಅಂದ್ರೆ ಅಂದಳು.

ಅಲ್ಲಾ ಕಣೆ! ನಿನ್ನ ಶಾಲೆ ವಿಳಾಸ ಕೊಟ್ಟುಬರಬಾರದಾಗಿತ್ತೆ, ನಿನ್ನ ಸಂಬಳ ದಲ್ಲೇ ಈ ಖರ್ಚುಮಾಡಬಾರದಾಗಿತ್ತೇನೇ? ಎಂದೆ.

ಅದು ಹ್ಯಾಗೋ? ಹೋದ ತಿಂಗಳು ನಾನು ನನ್ನ ಸಂಬಳದಲ್ಲಿ ನಾಲ್ಕು ಕರ್ಚೀಫ್ ತೊಗೊಂಡು ನಿಮಗೆ ಕಳಿಸಲಿಲ್ವೇ! ಈ ತಿಂಗಳು ನೀವು ನನ್ನ ಜವಳಿ ಖರ್ಚು ಹೊರಬೇಕಲ್ಲವೇ? ಎಂದು ರಾಗರಾಗವಾಗಿ ಹೇಳಿದಳು

ಅಷ್ಟುಹೊತ್ತಿಗೆ ಬೀಡಾ ಕಟ್ಟಿದ್ದೆ. ತೊಗೋ ಹೋಗಲಿ ಅಂತ ಅವಳಿಗೆ ಕೊಟ್ಟೆ. ಅವಳು ಕೊಂಕು ನಗೆಬೀರುತ್ತಾ ಬೀಡಾ ಅಗಿದಳು ಎದ್ದಳು. ಅಯ್ಯಯೋ! ಸುಣ್ಣ ಹೆಚ್ಚಾಗಿದೆಯಲ್ಲ ಅಂದ್ರೆ. ಬಾಯಿ ಉರೀತಾ ಇದೆ. ಮಾತು ಹ್ಯಾಗೆ ಆಡೋದು, ಪಾಠ ಹ್ಯಾಗೆ ಹೇಳೋದು ಅಂತ ಜೊಲ್ಲು ಸುರಿಸ್ತಾ, ಸ್ಸ್ಶ್, ಹಾ ಅಂತ ಬಾಯಿಬಾಯಿಬಿಡುತ್ತಾ ಹೇಳಿದಳು.

ನನ್ನ ಹೊಟ್ಟೇನೂ ಉರಿದು ಹೋಗ್ತಾ ಇದೆ ಕಣೆ, ಈ ಬಿಲ್ ನೋಡಿ, ನೀನು ಮಾತಾಡದೆ ಇದ್ದರೆ ಒಳ್ಳೇದೇ ಆಯಿತು ಪಾಠ ಹೇಳದೆ ಇದ್ದರೆ ಕತ್ತೆಬಾಲ ಹೋಯ್ತು. ಅಂತ ಅನ್ನೋಹೊತ್ತಿಗೆ ಬಸ್ ಬಂತು.

ಓಡಿದೆವು ಇಬ್ಬರೂ. ನನ್ನ ಬಸ್ಸು ಬಂದಿದ್ದುದು ಕೂತುಕೊಂಡು ಹೊರಟಾಗ ಅವಳ ಮುಖ ನೋಡಿದ್ದೆ. ಕಿಡಿ ಕಾರುತ್ತಾ ಇತ್ತು ಅವಳ ಕಣ್ಣುಗಳು.

ಮೈಸೂರಿಗೆ ಬಂದು ಹದಿಮೂರೇ ದಿನಗಳು ಆಗಿತ್ತು. ನಾವಿಬ್ಬರೂ ಮದುವೆ ಯಾದ ಹದಿಮೂರು ವರ್ಷದ ಮೇಲೆ ಒಟ್ಟಿಗೇ ಮನೆಮಾಡಿಕೊಂಡು ಸಂಸಾರ ಇದ್ದುದು ಈಗಲೇ. ಈಗಲೇ ಹೀಗಾದರೆ, ಯಾರಾದರೂ ಒಬ್ಬರು ವರ್ಗಮಾಡಿಸಿ ಕೊಂಡು ಹೋದರೆ ಸಂಸಾರ ಉಳಿದುಕೊಳ್ಳುತ್ತೆ, ಇಬ್ಬರೂ ತಂಪಾಗಿರಬಹುದು ಅನ್ನಿಸುತ್ತೆ.

ಈಗ ಹೇಳಿ.

—ಬಚ್ಚ.

ಅಲ್ಲಾ....ಹೀಗೂ ಉಂಟೇ....ಅಂತೀನಿ

ರೀ....ರೀ....ಸ್ವಲ್ಪ ಏಳ್ತೀರಾ....ಏಳೂವರೆಘಂಟೆಯಾಯ್ತು ರೀ ...ಭಾನು ವಾರವಾದ ಮಾತ್ರಕ್ಕೇ ಇಷ್ಟುಹೊತ್ತು ಮಲಗಿಕೊಳ್ಳೋದೇ

ಅಂತ ಉದಯರಾಗ ಹಾಡಿದಳು ಅರ್ಧಾಂಗಿ.

"ಇವತ್ತು ನನಗೇಕೋ ಮೈ ಕೈ ಎಲ್ಲಾ ಸಿಡೀತಾ ಇದೆ....ಜ್ವರಬರುವ ಹಾಗಿದೆ....ಸ್ವಲ್ಪ ಮಡಿ ಉಟ್ಕೊಂಡು ಅಡಿಗೆ ಮಾಡ್ತೀರೇನ್ರಿ...."

"ಜೋ ಹುಕುಂ ರಾಣೀ ಸಾಹೆಬಾ" ಅನ್ನುತ್ತಾ ಮೇಲಕ್ಕೆದ್ದು ಮಡಿಯುಟ್ಟು ಚೌಕಸುತ್ತಿಕೊಂಡು ವಿಭೂತಿ ಪಟ್ಟೆಹಾಕಿ ಥೇಟ್ ಪಾಲ್ಘಾಟ್ ಕಡೆ ಅಡಿಗೆಯವ ನಂತೆ ಅಡಿಗೆ ಮನೆಯಲ್ಲಿ ರಾರಾಜಿಸಿದೆ. ಒಂದು ಸ್ಟೋವ್ ಮೇಲೆ ಅನ್ನ ಕುದಿಯು ತ್ತಿತ್ತು. ಇನ್ನೊಂದರಮೇಲೆ ಸಾರಿಗಿಟ್ಟಿದ್ದೆ. ಪಲ್ಯಕ್ಕೆ ತರಕಾರಿ ಹೋಳು ಹೆಚ್ಚುತಾ ಇದ್ದೆ.

ಕರೆಘಂಟೆ (calling Bell) ಕರ್....ಅಂತ ಕಿರುಚಿತು. ನನ್ನಾಕೇನೇ ಹೋಗಿ ಬಾಗಿಲು ತೆಗೆದಳು.

"ಓಹೋಹೋ! ಬಾರೇ ವಿಜಯಾ....ಎಷ್ಟು ಅಪರೂಪವೇ ಅಷ್ಟು ದಿನ ದಿಂದ ಕರೆದದ್ದಕ್ಕೆ ಈಗ ಬಂದೆಯಲ್ಲಾ ಅವರು ಯಾರು ನಿಮ್ಮ ಯಜಮಾನ್ರಾ.... ಬನ್ನಿ ಒಳಗೆ.... ಬನ್ನಿ...."

ಇಷ್ಟು ಶಬ್ದಾನೂ ಕೇಳಿ ನಾನು ಬೆಚ್ಚು ಬಿದ್ದೆ.

ಮಾತು ಮುಂದುವರಿಯುವಷ್ಟರಲ್ಲಿಯೇ....ಕರೆಘಂಟೆ ಪುನಃ ಕಿರ್.... ಅಂತ ಶಬ್ದ ಮಾಡಿತು.

ಕೊಂಚಕಾಲ ನಿಶ್ಶಬ್ದ.

"....ಓಹೊಹೋ .. ಛಾಯಾ....ಎಷ್ಟು ಅಪರೂಪವೇ ನೀನು. ನನ್ನ ಮದು ವೇಗೂ ಬರ್ಲಿಲ್ಲವಲ್ಲ ನೀನು. ಏನು ನಾರ್ತ್ ಇಂಡಿಯಾಕ್ಕೆ ಹೋದಾಕ್ಷಣಕ್ಕೆ ನನ್ನ ಮರೆತುಬಿಡು ಅಂತ ಹೇಳಿದೆಯಾ ಬಾ ಒಳಗೆ. ನಿಮ್ಮ ಯಜಮಾನ್ರನ್ನೂ ಕರಿ...."

ನನಗೆ ಜಂಘಾ ಬಲವೇ ಬಿಟ್ಟು ಹೋಯಿತು.

ಮಾತು ಮುಂದುವರೆಯಿತು.

" ಇವತ್ತಂತೂ it is a great pleasure ಕಣೇ ನೀನು ಛಾಯಾ ಇಬ್ರೂ ಯಜಮಾನ್ರ ಜೊತೆ ಬಂದದ್ದು. ಒಳ್ಳೆ ಮಾತಾಡ್ಕೊಂಡು ಬಂದ್ಹಾಗೆ ಬಂದೀದೀರಲ್ಲೇ.... very happy....

ಅನ್ನುವಷ್ಟರಲ್ಲಿಯೇ.... " ಮೀನಾ....ನಿನ್ನ husband ಎಲ್ಲೇ.... introduce ಏ ಮಾಡ್ಬೇಡವಾ ಇಬ್ಬರಿಗೂ...."

" ಇಲ್ಲಾ ಕಣೇ ಅವರು ಊರಲ್ಲಿ... examination work ಗೆ ಧಾರವಾಡಕ್ಕಾ ಹೋಗಿದ್ದಾರೆ. ಇನ್ನೂ ಬರುವುದು ಒಂದು week ಆಗುತ್ತೆ "

ಇದು ನನ್ನ ಹೆಂಡತಿಯ ಶಬ್ದ. ನಾನು ಬೆಪ್ಪಾದೆ.

" ಭಟ್ಟಾ....ಕಾಫಿ ತಿಂಡಿ ರೆಡಿಮಾಡು." ಅಂತ ಕೂಗ್ದಾಗಿದ್ಳು ಧರ್ಮ ಪತ್ನಿ.

" ಭಟ್ಟಾ ..." ಯಾರದು ? ಎಂದು ನಾನು ಯೋಚಿಸುತ್ತಿರುವಷ್ಟರಲ್ಲಿಯೇ ಅವತರಿಸಿದಳು ಕೈ ಹಿಡಿದಾಕೆ ಅಡಿಗೆ ಮನೆಯೊಳಗೆ.

" ನೀವು ಒಂದು ವಾರದಿಂದ shave ತೆಗೆದುಕೊಂಡಿಲ್ಲ. ಒಳ್ಳೆ ತಂತಿಮೊಳೆ ಹೊಡೆದ ಹಲಗೆ ಹಾಗಿದೆ ಮುಖ. ಅದಕ್ಕೇ ನಾನು ನನ್ನ friends ಗೆಲ್ಲಾ ನೀವು ಊರಲ್ಲಿಲ್ಲ ಅಂದ್ಬಿಟ್ಟೆ." ಅಂತ ಅನ್ನುವಷ್ಟರಲ್ಲಿಯೇ

" ಮೀನಾ...." ಅಂತ ಕೂಗು ಬಂತು.

' ಬಂದೆ ವಿಜಯಾ ' ಅಂತ ಮಾಯವಾದಳು ನನ್ನವಳು.

" ಏನೇ cook ಬೇರೆ ಇಟ್ಟುಕೊಂಡಿದ್ದೀರಾ ಮನೆಯಲ್ಲಿ.

ಪರವಾಗಿಲ್ಲ ಕಣೇ....ಚೆನ್ನಾಗಿ ಅಡಿಗೆ ಗಿಡಿಗೆ ಮಾಡ್ತಾನೇನೇ....ಏನು pay ಕೊಡ್ತೀರೇ...."

" cook " ನನಗೆ ರೇಗಿ ಹೋಯಿತು. ಏನೂ ಮಾಡುವ ಹಾಗಿಲ್ಲ. ರೋಷದಲ್ಲಿ ಸಾರಿಗೆ ಒಗ್ಗರಣೆ ಹಾಕಿ ಬುಸುಗುಟ್ಟಿಸಿದೆ.

ಅಹಹಾ ! ಇಲ್ಲಿಗೇ ಘಂ ಅಂತ ವಾಸನೆ ಹೊಡೀತಾ ಇದೆಯಲ್ಲೇ....ಏನೇ ಅಡಿಗೆ ಇವತ್ತು ?"

ಲೇ ಛಾಯಾ ... ನೀನೇ ಹೊಗಳಬೇಕು ಕಣೇ ಅವನ ಅಡಿಗೆಯನ್ನ. ಶುದ್ಧ lazy lubber. ನಮ್ಮ ಕಾಲೇಜ್ ಕ್ಯಾಂಟೀನ್ ನೋಡಿದ್ದ ನೋಡು.... ಅವನು ನಮ್ಮ ಭಟ್ಟನಿಗಿಂತ ಸಾವಿರಪಾಲು ವಾಸಿ...."

' ಏನು pay ಕೊಡ್ತೀರೇ ' ?

" ತಿಂಗಳಿಗೆ ಐವತ್ತು ರೂಪಾಯಿ... free quarters... free meals.... ಇದಕ್ಕಿಂತ ಇನ್ನೇನೇ ಗುನುಗು... ಅದೂ ಸಾಲದಂತೆ...."

" ಅಬ್ಬಾ ಅದಕ್ಕಿಂತ ಇನ್ನೇನು. But in our town we do not get even if we pay 100 Rs /... isn't it Mr. Sitharam"

ಇದು ನಮ್ಮ ಮನೆ ಹಜಾರದಿಂದ ಬಂದ ಗಂಡುಧ್ವನಿ

Yes Mr. Anand, you are perfectly right"

ಓಹೋ ಈಗ ಅರ್ಥವಾಯಿತು. ನನ್ನ ಧರ್ಮಪತ್ನಿಯು ಸ್ನೇಹಿತೆಯರಿಬ್ಬರೂ with ಬಂದಿದ್ದಾರೇಂತ. ಕಾಫೀ ಉಪ್ಪಿಟ್ಟು ರೆಡಿಮಾಡ್ತಿದ್ದಾಗೇ....ಅಡಿಗೆ ಮನೆ ಕಡೆ ಇಡಿ ಗುಂಪೇ ದಯಮಾಡಿಸಿತು.

" ಇದೇ....ನಮ್ಮ ಮನೆ ಅಡಿಗೆ ಮನೆ ಕಣೇ....ನಗಬೇಡ ಸ್ವಲ್ಪ old type ನಮ್ಮ cook ಇದ್ದಾಗೆ. ಇವನೇ ನಮ್ಮ ಅಡಿಗೆ ಭಟ್ಟ...."

ಅಂತರ್ಗತ [ಇವನೇ ! ಎಲಾ ಇವಳ. ಈ ಸ್ಥಿತಿಗೆ ಬಂತೇ ನನ್ನ ಅವಸ್ಥೆ. ಇರಲಿ ಮಾಡ್ತೀನಿ. ಆದರೆ ಈಗ.ಸಮಯವಲ್ಲ]

" ನಮಸ್ಕಾರ.... ಸಾರ್.... ನಮಸ್ಕಾರ....ತಾಯಿ" ಅಂದೆ ಎಲ್ರೂ " ನಮಸ್ಕಾರ" ಅಂದ್ರೂ.

" ಅಲ್ಲಾ ಕಣೇ ಮೀನಾ ! ಸ್ವಲ್ಪ ನಿಮ್ಮ cook ಗೆ neat ಆಗಿ ಷೇವ್ ಗೀವ್ ಮಾಡ್ಕೋ ಅಂತ ಹೇಳಬೇಡವೇನೇ ನೀನು. ಯಾರು ನೋಡಬಹುದು ಹೇಳು ..."

' ಎಷ್ಟು ಹೇಳಿದರೂ ನಮ್ಮ ಭಟ್ಟ ಹಾಗೇ ಕಣೇ, ವಿಜಯಾ' ಅಂದಳು ನನ್ನಾಕೆ.

ನನಗೆ ನನ್ನ ಹೊಟ್ಟೆಯೊಳಗೆ ಪಂಜು ಹತ್ತಿಸಿದ ಹಾಗಾಯಿತು.

" ಉಪ್ಪಿಟ್ಟು ಕಾಫಿ ' ರೆಡಿ ' ತಾಯಿ ..." ಅಂತ ಕೂಗ್ದಾಕ್ದೆ.

ನನ್ನಾಕೆ ತಟ್ಟೆ ಬಟ್ಟಲುಗಳ ಸಮೇತ ರಾರಾಜಿಸಿದಳು. ಜೊತೆಯಲ್ಲಿ ವಿಜಯನ ಮಗಳು ಬೇರೇ ಬಂದಳು. ನಾನು ಏನೂ ಆಡುವ ಹಾಗಿಲ್ಲ. ಎಲ್ಲಾ ಇಟ್ಟುಕೊಂಡು ಮಾಯವಾದಳು ಹಜಾರಕ್ಕೆ.

ಫಲಹಾರ ಮುಗಿಯಿತು.

ಛಾಯನ ಯಜಮಾನ್ರಿಗೆ ಸಿಗ್ರೇಟ್ ಬೇಕಾಯ್ತಂತೆ. ನನ್ನಾಕೆ ' ಭಟ್ಟಾ ...' ಅಂತ ಕೂಗ್ದಾಕಿದ್ಲು

' ಬಂದೇ ತಾಯಿ....' ಅಂತ ಉತ್ತರಿಸಿದೆ.

ಪರಟು ಹಾಕ್ಕೊಂಡು ಹಾಜರಾದೆ.

' ನೋಡು, ಇವರಿಗೆ ಸಿಗರೇಟ್ ಬೇಕಂತೆ ಪಕ್ಕದ ಅಂಗಡಿಯಲ್ಲಿ ಹೋಗಿ ತೊಗೊಂಡ್ ಬಾ ' ಅಂತ ಅಂದ್ರು ಯಜಮಾಂತಿ.

Mr. Bhatta ' players ' ತೊಗೊಂಡ್ಬನ್ನಿ.... ಒಂದು ಪ್ಯಾಕು....

... Do you smoke Mr. Anand ? "

' No thank you please "....

ಎರಡು ನಿಮಿಷದಲ್ಲಿ Players ಸಮೇತ ಹಾಜರಾದೆ.

'quite a smart chap...." ಅಂತ ಶಹಾಭಾಸ್ ಗಿರಿ ಕೊಟ್ಟರು ಛಾಯಾಪತಿ.

" ಇನ್ನು ಬರ್ತೀವಿ ಕಣೇ ಮೀನಾ .. ಆಗ್ಲೇ teno'clock ಆಗ್ಹೋಯ್ತು.... ನಾನು ನಮ್ಮ Auntie ಮನೆಗೆ dinner ಗೆ ಹೋಗಬೇಕು. ಇನ್ನೂ ಸ್ವಲ್ಪ marketing ಇದೆ "

' ಇದೇನೇ ವಿಜಯಾ.... ನೀವೆಲ್ಲಾ ಊಟಮಾಡ್ಕೊಂಡು ಹೋಗಬೇಕು. ಖಂಡಿತ ನಾನು allow ಮಾಡುಲ್ಲ....'

' ಇಲ್ಲ ದಯವಿಟ್ಟು excuse ಮಾಡು ಮೀನಾ ...' ಅಂತ ಛಾಯಾದೇವಿ ಅಪ್ಪಣೆ ಕೊಡಿಸಿದರು.

' ಎಲ ...ಹೆಂಗಸ್ರು... ಸ್ವಲ್ಪ ಇಂಗ್ಲಿಷ್ ಬಂದ್ರೆ ಇಷ್ಟು ಜಭರ್‌ದಸ್ತೇ ನಿಮಗೆ ಅಂತ ನಾನು ಹಲ್ಲುಕಡಿಯುವರಭಸದಲ್ಲಿ ನಾಲಿಗೆ ಕಡಿದುಕೊಂಡು ವ್ಯದ್ವಾಡು ತ್ತಿದ್ದಾಗ್ಲೇ.

' ಲೋ ಭಟ್ಟಾ....ಎಲಡಿಕೆ ಸಿದ್ಧಮಾಡು...." ಅಂತ ಆಜ್ಞೆಯಾಯಿತು.

ಶಿರಸಾವಹಿಸಿ ಪಾಲಿಸಿದೆ.

ಅವರನ್ನೆಲ್ಲಾ ಬಸ್‌ಸ್ಟಾಂಡ್‌ನಲ್ಲಿ ಬಿಟ್ಟುಬಿಟ್ಟು ಬರ್ತೀನೆ ಅಂತ ಹೋದ ನನ್ನಾಕೆ ಹನ್ನೆರಡು ಘಂಟೆ ಹೊಡೆಯುವ ಹೊತ್ತಿಗೆ ಸರಿಯಾಗಿ ದಯಮಾಡಿಸಿದಳು. ಅಷ್ಟು ಹೊತ್ತಿಗೆ ನಾನು ಅಡಿಗೆಮನೇಲ ತಟ್ಟೆಹಾಕಿ ಊಟಕ್ಕೆ ಸಿದ್ಧಮಾಡಿದ್ದೆ.

' ಬರಬೇಕು ರಾಣಿದೇವಿಯವರು. ತಟ್ಟೆ ಹಾಕಿ ಸಿದ್ದವಾಗಿದೆ...." ಅಂತ ನಳವೇಷಧಾರಿಯಾಗಿಯೇ ನನ್ನಾಕೆಯನ್ನ ಸ್ವಾಗತಿಸಿದೆ.

" ಅಯ್ಯೋ..!.ಸುಮ್ಮನೇ ಇರೀಂದ್ರೆ ಸಾಕು ಹುಡುಗಾಟ. ಇನ್ನುಮೇಲಾದರೂ clean ಆಗಿ shave ಮಾಡ್ಕೊಂಡು tidy ಆಗಿ ಇರೂದ ಕಲಿತುಕೊಳ್ಳಿ ಅಂತ ಮುಗುಳು ನಗೆ ಬೀರಿದಳು.

ಅದೇನು ಹಾಳು ಗಂಡು ಜನ್ಮವೋ.... ವದನಾರವಿಂದದ ದಂತಾವಳಿಗಳನ್ನು ಕಂಡೊಡನೇ ಬೆಳಗಿನ ಪ್ರಸಂಗವೆಲ್ಲಾ ಮರೆತು ಹೋಗೋಣವೇ ?

—ಸಿ. ಕೆ. ಎನ್. ರಾಜ

ಶು ಚಿ ದಿ ನ

ಚುಮು ಚುಮು ಚಳಿ. ಮುಸಕು ಕತ್ತಲು ಮುಂಜಾನೆಯ ಮೊದಲ ಹುಂಜ ಕೂಗುವ ಹೊತ್ತು. ಕ್ಷಮಿಸಿ ಅನೇಕರು ಮುಂಜಾನೆಯ ಮೊದಲ ಕೋಳಿ ಯಾವ ವೇಳೆಗೆ ಕೂಗುತ್ತೆಂಬುದನ್ನು ತಿಳಿದಿರಲಾರರು. ಸುಮಾರು ಎರಡೂವರೆ ಘಂಟೆ ಸಮಯ ಆಗ ಮೊದಲ ಹುಂಜ ಕೂಗುವ ಮೊದಲೇ ನಮ್ಮ ತಾತಾಚಾರಿ ಕೂಗಿದ

ಬೆಳಗಿನ ಝಾಮು ಒಂಭತ್ತಕ್ಕೆ ಮೊದಲು ಏಳುವ ಅಭ್ಯಾಸವೇ ಇಲ್ಲದ ಭೂಪತಿ, ಮುಸುಕನ್ನು ಕಿತ್ತೆಸೆದು, ಮೈಸೆಟಿಸಿ, ಲವಲವಿಕೆಯಿಂದ ಎದ್ದ. ಬಚ್ಚಲಮನೆಗೆ ದೌಡಾಯಿಸಿದ. ಅಲ್ಲಿಂದ ಒಂದು ಬಕೇಟು ನೀರನ್ನು ತಂದು ಮಲಗಿದ್ದ ಅವನ ಕರ್ಮಪತ್ನಿ, ಎಲ್ಲರ ಮುಸುಗನ್ನು ಕಿತ್ತೆಸೆದು ಅವರುಗಳ ಮೂತಿಯ ಮೇಲೆ ಕೊರೆಯುವ ನೀರನ್ನು ಸಿಂಪಡಿಸಿ, ಎಬ್ಬಿಸಿದ. ನಾನು ಅವನ ಗೆಸ್ಟು ಅರ್ಥಾತ್ ಅತಿಥಿಯಾಗಿದ್ದೆ. ಆದ್ರೆ ನನ್ನನ್ನೂ ಅವ ಬಿಡಲಿಲ್ಲ ನನಗೂ ಅದೇ ಟ್ರೀಟ್‌ಮೆಂಟ್ ಕೊಟ್ಟ.

“ಯಾಕೋ ತಾತಾಚಾರಿ, ಸುಮ್ನೆ ಯಾಕೆ ಹಿಂಸೆ ಕೊಡ್ತೀಯೆ? ಮುಂಜಾನೆ ಎಂಟಕ್ಕೆ ಕಡಿಮೆ ನನಗೆ ಎಚ್ಚರವಾಗೋ ಅಭ್ಯಾಸವೇ ಇಲ್ಲ” ಅಂತ ಮುಸುಕಿನೊಳಗಿಂದಲೇ ಕೂಗಿದೆ. ಆ ಹಟಮಾರಿ ಅದನ್ನೆಲ್ಲಾ ಕೇಳ್ತಾನೆಯೆ? ಬಲವಂತವಾಗಿ ನನ್ನನ್ನೆಬ್ಬಿಸಿ ಬಚ್ಚಲು ಮನೆಗೆ ನೂಕಿದ.

ತಾತಾಚಾರಿಯ ಬಲವಂತಕ್ಕೊಳಗಾಗಿ ಬೇವಿನ ಕಡ್ಡಿಯ ನಾಟಿಬ್ರಷ್‌ನಿಂದ ವಸಡು ಕಿತ್ತು ಬರುವ ತನಕ ನಮ್ಮ ದಂತಧಾವನ ನಡೆಯಿತು. ಹಲ್ಲಿಗಂಟಿದ್ದ ನಮ್ಮ ಜನ್ಮದ ಕೊಳೆಯನ್ನು ಒಂದೇ ದಿನದಲ್ಲಿ ತೊಳೆದುಹಾಕಬೇಕಂತ ಹಟ ಹಿಡಿದಿದ್ದನೋ ಏನೋ ನನ್ನ ಕೋರಿಕೆಯ ಮೇಲೆ ಎರಡು ಘಂಟೆಯ ನಂತರ ಹಲ್ಲುಜ್ಜುವುದನ್ನು ನಿಲ್ಲಿಸುವುದಕ್ಕೆ ಅಪ್ಪಣೆಯಿತ್ತ ಮಹರಾಯ

ಮುಖ ತೊಳೆದುಕೊಂಡು ಹೊರಬರುವುದರಲ್ಲಿ ತಾತಾಚಾರಿ ಎಡಡುಮಕರಿ ಕರಿಕಂಚಿನ ಪಾತ್ರೆಗಳನ್ನು ನಾಲ್ಕು ಮಕರಿ ಕಿಮಟಿನ ಹಿತ್ತಾಳೆ ಪಾತ್ರೆಗಳನ್ನು ತಂದು ಬಚ್ಚಲು ಮನೆಯಲ್ಲಿ ಗುಡ್ಡೆ ಹಾಕಿದ. “ಇದನ್ನೆಲ್ಲಾ ತೊಳೆದು ಕ್ಲೀನ್ ಮಾಡಿಬಿಡ್ಬೇಕು, ಅರ್ಧಘಂಟೆ ಮಾತ್ರ ಇದಕ್ಕೆ ಟೈಂ ಕೊಟ್ಟಿದೆ” ಅಂತಂದ ತಾತಾಚಾರಿ.

“ಲೋ ಇಷ್ಟೊಂದು ಪಾತ್ರೆ ಒಂದೇ ದಿನದಲ್ಲಿ ತೊಳೆದು ಪೂರೈಸೋಕೆ ಆಗುತ್ತೇನೋ? ದಿನಕ್ಕೆ ನಾಲ್ಕರಂತೆ ತೊಳೆದರೆ ಸುಲಭವೂ ಆಗುತ್ತೆ ಚೊಕ್ಕವೂ ಆಗುತ್ತೆ” ಅಂತ ಬುದ್ಧಿ ಹೇಳಿದೆ.

ಆದ್ರೆ ಅವನ ಹಟವೇ ಅವನಿಗೆ.

"ಬಾರೇ ಇಲ್ಲಿ" ಅಂತ ಹೆಂಡತೀನ ಕರೆದ. ಅವನ ಕುನ್ನಿಗಳೂ ಹಾಜರಾದವು. ತಾತಾಚಾರಿಯೂ ಸೊಂಟಕ್ಕೆ ಟವಲನ್ನು ಕಟ್ಟಿಕೊಂಡು ಎಲ್ಲರೂ ಪಾತ್ರೆಗಳನ್ನು ಬರ ಬರನೆ ತಿಕ್ಕಲು ಮೊದಲು ಮಾಡಿದರು. ನಾನೂ ವಿಧಿಯಿಲ್ಲದೆ ಕೈಕೂಡಿಸಿದೆ. ಅಂತೂ ಒಂದುಘಂಟೆಯ ಅವಧಿಯಾರಿ, ಆ ಪಾತ್ರೆಗಳನ್ನು ಸಾಧ್ಯವಾಷ್ಟು ಬೆಳ್ಳಗಾಗಿಸಿದೆವು.

ಇದು ಮುಗಿಯುವುದೇ ಕಾಯುತ್ತಿದ್ದ ಖಧೀಮ ಓಡಿಹೋಗಿ ಮನೆಯೆಲ್ಲಾ ಗೂರಾಡಿ, ಕೊಳಕು ಬಟ್ಟೆಗಳ ರಾಶಿಯನ್ನೇ ತಂದು ಒಗೆಯಲು ಹಾಕಿದ ಜನ್ಮದಲ್ಲೂ ಸೋಪಿನ ವಾಸನೆಯನ್ನೇ ಕಾಣದ ಆ ಬಟ್ಟೆಗಳನ್ನು ಶುಭ್ರಗೊಳಿಸಲು ಒಂದು ಘಂಟೆ ಕಾಲಾವಕಾಶವಿತ್ತು. ಮೂಗು ಮುಚ್ಚಿಕೊಂಡು ನಾವೆಲ್ಲಾ ಅದನ್ನು ಒಗೆದು ಒಣ ಹಾಕಿದೆವು.

ಇನ್ನು ಮತ್ತೇನು ತರ್ತಾನೋ ಎಂದು ಹೆದರಿ ನಿಂತಿದ್ದ ನನ್ನ ಕಣ್ಣಿಗೆ ಕಸ ಬರಲು ಪಾಣಿಯಾಗಿ ತಾತಾಚಾರಿ ನಿಂತಿರುವುದು ಕಾಣಬಂದು ಅಚ್ಚರಿಯಾಯಿತು.

"ಎಲಾ ಈ ಸೋಂಭೇರಿ ಇಷ್ಟು ಪಾದರಸವಾಗಿದ್ದಾನಲ್ಲಾ" ಅಂತ ನನಗೆ ಸೋಜಿಗವಾಯಿತು. "ಒಂದರ ತಪ್ಪ ಮತ್ತೊಂದು ಕೆಲಸವನ್ನು ಹುಡುಕಿಕೊಂಡು ಪೂರೈಸುತ್ತಿದ್ದಾನಲ್ಲಾ ಏನಿದರ ಐತಿಹ್ಯ?" ಅಂತ ಒಳಮರ್ಮ ತಿಳಿಯದೆ ಒದ್ದಾಡಿದೆ.

ತಾತಾಚಾರಿ ಐದು ಕಸಬರಲುಗಳನ್ನು ತಂದು ತಲಾ ಒಂದೊಂದು ಹಂಚಿದ. ನಾವುಗಳು ಕಷ್ಟಬಿದ್ದು ಮನೆಯಲ್ಲಿ ಮೂಡಿದ್ದ ಅಷ್ಟು ವರ್ಷದ ಗಲೀಜನ್ನು, ಒದರಿ ಚೊಕ್ಕ ಪಡಿಸಿದೆವು. "ಇವತ್ತು ಸಾಕು ಕಣಯ್ಯ ನಾಳೆ ಮಿಕ್ಕಿದ್ದು ಮಾಡೋಣ ವಂತೆ" ಅಂತ ಗೋಗರೆದು ಹೇಳಿದೆ. ಆದರೆ ಆ ಮೊಂಡ ಅಲ್ಲಿಗೆ ಬಿಟ್ಟರೆ ತಾನೆ? ಅಜೂ ಬಾಜು ಮನೆಗಳಿಗೆಲ್ಲಾ ನುಗ್ಗಿ, ಅವರ ಮನೆಗಳ ಕಸವನ್ನೆಲ್ಲಾ ಬಳಿದ, ಕೇರಿಯ ಗಲ್ಲಿ ಗಲ್ಲಿಗಳನ್ನು ಗುಡಿಸಿದ. ಕೆಲಸ ಕಾಣದೆ ಕುಳಿತಿದ್ದ ಸಮಾಜ ಸೇವಕರ ಹಿಂಡು, ಇವನ ಕೂಟೆ ಸೇರಿ ಕಸಬರಲು ಹಿಡಿದು ಬೀದಿ ಗುಡಿಸಿದರು ತಾತಾಚಾರಿಯ ಮನೆ ಮುಂದೆ ಹಾರಾಡುತ್ತಿದ್ದ ಎಂಜಲೆಲೆಗಳನ್ನೆಲ್ಲಾ ಹಿಡಿದು, ಆ ಜಾಗವನ್ನೆಲ್ಲಾ ಶುಚಿಗೊಳಿಸಿದ್ದಾಯ್ತು. ಅಂತೂ ಅವನ ಸ್ನೇಹಕ್ಕೆ ಕಟ್ಟುಬಿದ್ದು ನಾನೂ ಕೇರಿಗಳನ್ನೆಲ್ಲಾ ಗುಡಿಸಿ ಸಾರಿಸಿ ರಂಗವಲ್ಲಿ ಇಟ್ಟೆ.

ಕೊಳೆಯಿಂದ ತುಂಬಿ ನಾರುತ್ತಿದ್ದ ಮುಳ್ಳೂರಿನ ಬೀದಿಗಳೆಲ್ಲಾ ಸ್ವಚ್ಛವಾಗಿ ಕಂಗೊಳಿಸಿತು.

ಮುಳ್ಳೂರಿನ ಜನಸ್ತೋಮಕ್ಕೆ ತಾತಾಚಾರಿ ಮಡಿ ಉಡಿಸಿದ. ಅವರಿವರ ಸಹಾಯದಿಂದ ಅವರುಗಳ ಬಟ್ಟೆಗಳನ್ನೆಲ್ಲಾ ಒಗೆಸಿ ಶುಭ್ರಗೊಳಿಸಿದ. ಇದೆಲ್ಲಾ

ನೋಡಿ ನನಗೂ ರೇಗಿತು. ಎಲಾ ಇದೇನು ಇವನ ಪೈತ್ಯ. ತಮ್ಮ ಮನೆ ಕೆಲಸ ವೇನೋ ಸರಿಯೆ ಮಾಡಬೇಕಾದ್ದೆ. ಆದರೆ ಊರಿನ ಕೆಲಸವನ್ನೆಲ್ಲಾ ತಲೇ ಮೇಲೆ ಹಾಕಿಕೊಂಡು, ಅವರ ಬಟ್ಟೆ ಒಗೆಯೋದು ಮುಸುರೆ ತಿಕ್ಕೋದು, ಕಸ ಬಳಿಯು ವುದು, ಇದೆಲ್ಲಾ ಯಾವ ತೀಟೆ ಇವನಿಗೆ? ನಗರ ಸಭಾಧ್ಯಕ್ಷನಾಗಿದ್ದಕ್ಕೆ ಈ ಹಣೆ ಬರಹವೆ? ಚುನಾವಣೆಯೂ ಹತ್ತಿರವಿದ್ದ ಹಾಗೆ ಕಾಣಲಿಲ್ಲ. ಅಂಥಾದ್ದರಲ್ಲಿ ಇವನ ಈ ಕಾರಭಾರದ ಮರ್ಮವೇನು? ಇವನಿಗೇನಾದರೂ ಹುಚ್ಚೆ? " ಇತ್ಯಾದಿ ಪ್ರಶ್ನೆಗಳು ನನ್ನ ಮಿದುಳನ್ನು ತಿಂದವು." ಈತನ ಹುಚ್ಚಿಗೆ ಗೆಜ್ಜೆ ಕಟ್ಟೆ ನಾವು ಕುಣಿದುವಲ್ಲಾ ಅಂತ ಕೊರಗಿದೆ ನಾನು " ಸಧ್ಯ, ನಮ್ಮೂರಿನ ನಭದೆಡೆಗೆ ನಾಲಿಗೆ ಚಾಚಿ ನಿಂತಿದ್ದ ಮುಳ್ಳಾದ್ರಿ ಬೆಟ್ಟವನ್ನ ಗುಡಿಸ್ತೀನಿ ಅಂತ ತಾತಾಚಾರಿ ಹಟ ಹಿಡೀಲಿಲ್ಲವಲ್ಲ ಅದೇ ನಮ್ಮ ಪುಣ್ಯ " ಅಂತಂದುಕೊಂಡೆ.

ಸಾಯಂಕಾಲದ ವೇಳೆಗೆ ಸಚಿವರ ಸೆಡಾನ್ ಕಾರೊಂದು ನಮ್ಮ ಮುಳ್ಳೂರಿಗೆ ಬಂತು. ಪಕ್ಕದ ಮೋಶಂಬೂರಿನ ಕಿರಿಸ್ತಾನಿ ಚರ್ಚಿನಲ್ಲಿ " ದ್ವೈತಾದ್ವೈತದ " ಬಗ್ಗೆ ಭಾಷಣ ಬಿಗಿಯುವ ಪ್ರೋಗ್ರಾಂ ಅವರಿಗಿತ್ತಂತೆ ಮೋಸಂಬೂರಿಗೆ ಹೋಗ ಬೇಕಾದರೆ ಮುಳ್ಳೂರಿನ ಮೇಲೆ ಹಾದು ಹೋಗಬೇಕಾದುದರಿಂದ ಸಚಿವರ ಕಾರು ನಮ್ಮೂರಿಗೆ ಬಿಜಯಮಾಡಿಸಿತ್ತು. ತಾತಾಚಾರಿಗೆ ಇದು ತಿಳಿದಿತ್ತೋ ಏನೋ ಹೇಳ ಲಾರೆ ಸಚಿವರೇನೋ ಮುಳ್ಳೂರಿನ ಬೀದಿಗಳ ಸ್ವಚ್ಛತೆ ಕಂಡು ಅಚ್ಚರಿಪಟ್ಟರು. ಮುಳ್ಳುಗಳಿರಲಿ ಒಂದು ಕಲ್ಲೂ ಕಾಣಿಸದ ಹಾಗೆ ಬೀದಿಗಳು ಚೊಕ್ಕವಾಗಿದ್ದನ್ನು ನೋಡಿ, ಅವರಿಗೆ ಸೋಜಿಗವಾಯಿತು. ಬೀದಿಯಲ್ಲಿ ಸಾಮಾನ್ಯವಾಗಿರಲೇಬೇಕಾದ ಹೇಸಿಗೆಗಳು, ಬೂದಿರಾಶಿ, ಗೊಬ್ಬರದ ಗೋಡು, ಎಂಜಲು ಎಲೆಗಳೂ, ಒಂದೂ ಇಲ್ಲದೆ ಮಾಯವಾಗಿರುವುದನ್ನು ಕಂಡು ಮೂಗಿನ ಮೇಲೆ ಬೆರಳಿಟ್ಟುಕೊಂಡರು. ತಮ್ಮ ಸೆಡಾನನ್ನು ಕೇರಿಯಬೀದಿಗಳಲ್ಲಿ ಸುತ್ತಿಸಿ ಎಲ್ಲವೂ ನಿರ್ಮಲವಾಗಿರುವುದನ್ನು ಕಂಡು ಹಿಗ್ಗಿದರು. " ಇಲ್ಲಿಯ ಪುರಸಭಾಧ್ಯಕ್ಷರು ಯಾರು? " ಅಂತಲ್ಲೂ ಕೇಳಿದರು.

ಕಂಕುಳಲ್ಲಿ ಕಸಬರಲು ಹಿಡಿದಿದ್ದ ತಾತಾಚಾರಿಯನ್ನು ಯಾರೋ ಹಿಡಿದು ತಂದರು. ಅವ, ಸಿದ್ಧಪಡಿಸಿಟ್ಟುಕೊಂಡಿದ್ದ ದಂಡೆ ಹಾರವನ್ನು ಸಚಿವರ ಗೋಣಿಗೆ ತಗುಲಿ ಹಾಕಿ ನಿಂಬೆಹಣ್ಣನ್ನು ಅವರ ಕೈಗೆ ರವಾನಿಸಿ, ಕೈ ಒದರಿಕೊಂಡು ನಿಂತ.

ಸಚಿವರು ತಾತಾಚಾರಿಯ ನಗರ ನೈರ್ಮಲ್ಯ ಕಾರ್ಯವನ್ನು ಶ್ಲಾಘಿಸಿದರು. ಮೊದಲಿಂದಲೂ ಮುಳ್ಳೂರು ಬಹಳ ಮಡಿವಂತ ಊರೆಂದು ಲಾಗಾಯಿತಿಂದಲೂ, ನೈರ್ಮಲ್ಯದಲ್ಲಿ ಈ ಊರು ಮಿಕ್ಕ ಊರುಗಳಿಗೆ ಮೇಲ್ಪಂಕ್ತಿ ಹಾಕಿಕೊಟ್ಟಿದೆಯೆಂದೂ ನಮ್ಮೂರಿನ ವಿಷಯ ಬಹಳ ತಿಳಿದವರಂತೆ ಭಾಷಣ ಬಿಗಿದು ಸೆಡಾನ್‌ನಲ್ಲಿ ಕುಳಿತು, ಸಾಗಿ ಹೋದರು.

ಮೂರನೆ ದಿನ ನನಗೆ ಬೆಳಿಗ್ಗೆ ಎರಡೂವರೆಗೆ ಎಚ್ಚರವಾಯ್ತು. ತಾತಾಚಾರಿ ಇನ್ನೂ ಮುಸುಕು ಬೀರಿ ಮಲಗಿರುವುದು ಕಂಡು ನನಗೆ ಅಚ್ಚರಿಯಾಯ್ತು. ನಾನೇ ಅವನ ಮುಸುಕು ಕಿತ್ತು ಹಾಕಿ, ಬಚ್ಚಲು ಕೋಣೆಯಿಂದ ನೀರು ತಂದು, ಅವನ ಮೂತಿಗೆ ಸಿಂಪಡಿಸಿದೆ. ತಾತಾಚಾರಿ ಕಣ್ಣುಬಿಟ್ಟು ನನ್ನನ್ನು ನೋಡಿ ರೇಗಿದ.

"ಯಾಕೋ ಬುದ್ಧಿ ನೆಟ್ಟಗಿದ್ಯೋ ಇಲ್ವೋ ನಿಂಗೆ" ಅಂತ ಗದರಿಕೊಂಡ. "ನನಗೇನೋ ನೆಟ್ಟಗಿವೆ ನಿನ್ನ ಬುದ್ಧಿ ಸೊಟ್ಟಗಿದೆ ಅಷ್ಟೆ. ನಿನ್ನೆ ಅಷ್ಟು ಬೇಗ ಎದ್ದು ಲವಲವಿಕೆಯಿಂದ ಪಾದರಸದಂತೆ ಕೆಲಸ ಮಾಡಿ ಹೊಗಳಿಸಿಕೊಂಡೆ. ಇವತ್ತು ಮೂರೂವರೆಯಾದ್ರು ಮುಸುಕು ಬೀರಿದ್ದೀಯಲ್ಲಾ ಏಳಯ್ಯಾ ಸುಮ್ನೆ" ಅಂತ ಪೀಡಿಸಿದೆ.

"ಲೋ ಸುಮ್ನೆ ಹೋಗಿ ಬಿದ್ಕೋಳ್ಳೊ ಏನೊ ನಿನ್ನೆ ಒಂದು ದಿನ ಹಾಗೆ ಮಾಡಿದೆ ಅಂತಾ ದಿನಾ ಮಾಡಿ ಪೂರೈಸೋಕೆ ಆಗುತ್ತೇನೋ? ನಿನ್ನೆ ಅಕ್ಟೋಬರ್ ಎರಡನೇ ತಾರೀಖು 'ಶುಚಿದಿನ' ಅಂತ ಸರ್ಕಾರದೋರು ಘೋಷಿಸಿ, ಆದಿನ ಮಾತ್ರ ಶುಚಿಯಾಗಿರಬೇಕು ಅಂತ ಪ್ರಸಾರ ಮಾಡಿದ್ದರಿಂದ ಹಾಗೆ ಮಾಡಿದ್ದಾಯ್ತು. ನಿನ್ನೆ ಶುಚಿಯಾಗಿದ್ದದ್ದು ಆಯ್ತಲ್ಲ, ಇನ್ನು ಸುಮ್ನೆ ಬಿದ್ಕೋ ಹೋಗು" ಅಂತಂದ.

ಆದ್ರೂ ನನಗೆ ನಿದ್ದೆ ಬರಲಿಲ್ಲ ನಾನೂ ಹಾಗೆ ಹೊರಗೆ ಹೋದೆ. ನಿನ್ನೆ ರಾತ್ರಿ ಶ್ರೀಮತಿ ತಾತಾಚಾರಿ ಎಸೆದಿದ್ದ ಎಂಜಲೆಲೆಗಳ ಕಂತೆ, ತಾತಾಚಾರಿ ಮನೆ ಮುಂಬಾಲಿಗಿಲಲ್ಲೇ ಬಿದ್ದು ಹಾರಾಡುತ್ತಿತ್ತು. ಹಾಗೇ ಮಾರ್ನಿಂಗ್ ವಾಕ್ ಆಗುತ್ತೇಂತ ಮುಳ್ಳೂರಿನ ಬೀದಿಗಳಲ್ಲಿ ಸುತ್ತಿದೆ. ಗೊಬ್ಬರ, ಕಸ, ಬೂದಿ, ಕೊಳೆತ ತರಕಾರಿ ಸಿಪ್ಪೆ, ಎಲ್ಲವೂ ರಸ್ತೆಯಲ್ಲಿ ಶೋಭಿಸುತ್ತಿತ್ತು. ಮೋಸಂಬೂರಿನಿಂದ ಆಗ ತಾನೆ, ಸೆಡಾನ್‌ನಲ್ಲಿ ಮೈಸೂರಿಗೆ ಮರಳುತ್ತಿದ್ದ ಸಚಿವರು, ಮುಳ್ಳೂರು ಮೇಲೆ ಹಾದು ಹೋದಾಗ ಮೂಗಿಗೆ ಕರವಸ್ತ್ರವನ್ನು ಹಚ್ಚಿ ಕಾರನ್ನು ವೇಗವಾಗಿ ಬಿಟ್ಟುಕೊಂಡು ಹೋಗುತ್ತಿದ್ದುದು ನನ್ನ ಕಣ್ಣಿಗೆ ಬಿತ್ತು.

—ಕೆ. ಎನ್. ಕಿಟ್ಟೆನ್.

ಎ ಬಿ ಸಿ ಡಿ

ಕಲ್ತದ್ದೇ ಕಲ್ತದ್ದು ಎ ಬಿ ಸಿ ಡಿ
ನಮ್ಮ ಅನ್ನೋದೆಲ್ಲ ಹಿಂದಾಗಿ
ಬಾಳಿದ ದೇಶ ಸತ್ವ ಕಳುಕೊಂಡ್ ಬಡುಕಲಾತು
ಪ್ರಾಯದ ಮಕ್ಳಿಗೆಲ್ಲ
ದುಡಿಯೋದ್ ಹೇಳಿಕೊಡೇಲ್ಲ
ಕಲ್ತ ಕೈಗಳು ಸಿಗರೇಟ್ ಹಿಡಿಯಂಗಾತು.

— ಬಿಜಾಯ್

" ಸಾಸಿವ ಸಿಡಿದಹಾಗೆ "

ಸಿಡಿಮಿಡಿಗುಡ್ತಾ ಇದ್ದರು, ನಮ್ಮ ಸಾಹೇಬರು. ನನ್ನ ಕಂಡರನಕ ಸಿಡಿದೇ ಬೀಳ್ತಾ ಇದ್ದರು. " ಏನಯ್ಯಾ! ಫುಟ್‌ಬಾಲ್ ಆಡ್ತಿಸಾಯಂಕಾಲ, ಆಮೇಲೆ ಬ್ಯಾಡ್‌ಮಿಂಟನ್ ಆಡ್ತಿ. ಇಷ್ಟೆಲ್ಲಾ ಆಡಿದೋನು ಕಚೇರಿಲಿ ಕೆಲಸ ಮಾಡುಕ್ಕೆ ಆಗುತ್ತೇನಯ್ಯ? ಅಂತಲೇ ರೇಗ್ತಿದ್ದರು " ಕೆಲಸಾನ ತಕ್ಕಮಟ್ಟಿಗೆ ಮಾಡ್ತಾ ಇದೀನಿ. ಬಾಕಿ ಒಂದೂ ಒಂದು ದಿನವೂ ಇಟ್ಟುಕೊಂಡಿಲ್ಲ." ಎಂದು ವಿನಯವಾಗಿ ನಾನು ಹೇಳಿದರೆ ಇನ್ನೂರೇಗೋರು. " ಬಾಕಿ ಯಾಕೆ ಇರುತ್ತೆ, ಏನಾದರೂ ಓದಿ ಯೋಚನೆಮಾಡಿ, ಕಾನೂನು ನೋಡಿ ಷರಾ ಬರೀಬೇಕಾದರೆ ಕಷ್ಟ. ಸೈ ಅಂತ ಬರೆದು ಸಾಗಿಹಾಕಿದರೆ ಬಾಕಿತಾನೇ ಯಾಕೆ?" ಎಂದೇ ರೇಗುವರು. ಪಾಪ! ಕೂತುಕೊಳ್ಳುಕ್ಕೆ ಕಷ್ಟವಾಗಿರಬಹುದು, ಅದರ ಕೋಪಾನ ನನ್ನಮೇಲೆ, ನನ್ನ ದೇಹಸ್ಥಿತಿ ಚೆನ್ನಾಗಿದೆ ಅನ್ನೋದನ್ನು ನೋಡಿ, ಕರುಬಿ ಹೀಗೆ ಎಗರಾಡ್ತಾರೆ ಅಂತ ಊಹಿಸಿಕೊಂಡು, ನಾನೂ ಎದುರು ಮಾತಾಡದೆ " ಹ್ಞೂ ಸಾರ್ " " ಆಗಲಿಸಾರ್, " ದಿಟಸಾರ್, ಅಲ್ಲವೇ ಸಾರ್ " ಅಂತಲೇ ಕಾಲಹಾಕ್ತಾ ಇದ್ದೆ. ಐವತ್ತರ ಪ್ರಾಯ ಅವರಿಗೆ ಎರಡನೆ ಮದುವೆಮಾಡಿಕೊಂಡರು ಆಮೇಲನಕ. ಅವರು ರೇಗಿಬೀಳೋದು ಅತಿಯಾಗಿ ಹೋಯಿತು. ಕೆಲಸಕ್ಕೆ ರಾಜೀನಾಮೆಕೊಡಲೆ, ಅಂತ ಅನ್ನಿಸಿಬಿಡ್ತು. ವರ್ಗಮಾಡಿಸಿಕೊಳ್ಳೋಹಾಗಿರಲಿಲ್ಲ; ಇಲ್ಲೇ ಸ್ವಂತ ಮನೆ ಇದ್ದಿದ್ದು, ನಮ್ಮ ಫುಟ್‌ಬಾಲ್ ಸಂಘಕ್ಕೆ ನಾನೇ ಬೆನ್‌ಮೂಳೆ. ಹೇಗೆ ಬಿಟ್ಟು ಹೋಗೋಕ್ಕೆ ಆಗುತ್ತೆ ?

ನೌಕರಿ ಸ್ಥಿತಿ ಈ ಪರಿ ಇರುವಾಗ ಒವ್ಮೆ ಸಾಹೇಬರಿಂದ ಬುಲಾವ್ ಬಂತು. ಇವತ್ತೇನು ಉಗುಳ್ತಾರೋ? ಪರಚತಾರೋ ಅಂದುಕೊಂಡೇ ಹೋದೆ ಹಸನ್ಮುಖರಾಗಿದ್ದರು ಸಾಹೇಬರು. ಎಲಾ! ಇದೇನು ಕನಸೇ! ಅಥವಾ ಅವರ ಎರಡನೆ ಹೆಂಡತಿ ಈಗ ಒಲಿದಿರಬಹುದೇ? ಒಳ್ಳೆ ಮಾತನಾಡಿರಬಹುದೇ? ಎಂದು ಅನುಮಾನಬಂದು, ನಮಸ್ಕಾರ ಸಾರ್ ಅಂದೆ. " ಬಾಯ್ಯ ಕೂತುಕೋ " ಅಂದರು ಅತಿವಿನಯದ ಈ ನಡವಳಿಕೆ ಗಾಬರಿ ತಂತು. ನಡುಗುತ್ತಾ ಕುರ್ಚಿ ತುದೀಲಿ ಅರ್ಧ ಕೂತುಕೊಂಡೆ ಸೋಮನಾಥಪುರದಲ್ಲಿ ನಿಮ್ಮ ಮಾವನವರು ಇದ್ದಾರೆ ಅಂತ ಕೇಳಿದ್ದೆ. ದಿಟವೇನಯ್ಯ ಅಂದರು. ಹ್ಞೂ ಸಾರ್ ಅಂದೆ. ನೋಡಯ್ಯ ದಂಪತಿಗಳು ನಾವು ಅಲ್ಲಿಗೆ ರಜಾ ಹೋಗಬೇಕು ಅಂತ ಯೋಚಿಸ್ತಾ

ಇದ್ದೀವಿ. ನಿಮ್ಮ ಮಾವನವರಿಗೆ ಕಾಗದ ಬರೆದು ಅಲ್ಲಿ ಒಂದು ನಾಲ್ಕು ದಿನ ಉಳಕೊಳ್ಳುಕ್ಕೆ ಮಿಕ್ಕ ಸೌಕರ್ಯಕ್ಕೆ ಅನುಕೂಲಮಾಡಿಸಿಕ್ಕೆ ಆಗುತ್ತಾ ಎಂದು ಕೇಳಿದರು.

" ಇದಕ್ಕೇನು ಕಷ್ಟ ಸಾರ್ ! ಇವತ್ತೇ ಕಾಗದ ಬರೀತೀನಿ. ನಮ್ಮ ಮಾವ ನವರು ಹಳ್ಳಿ ಪೌರೋಹಿತ್ಯೆ ಮಾಡ್ತಾ ಇದ್ದರೂ, ಅವರು ಮಾತು ನಡೆಯುತ್ತೆ." ಎಂದೆ.

" ನಮ್ಮ ಆಕೀಗೆ ಹಾವು ಚೇಳು ಅಂದರೆ ತುಂಬಾ ಭಯ. ಅದಕ್ಕೋಸ್ಕರ ಸಿಕ್ಕಿದ ಪ್ರವಾಸ ಮಂದಿರದಲ್ಲಿ ಉಳಿದುಕೊಳ್ಳುಕ್ಕೆ ಗಾಬರಿ. ನಿಮ್ಮ ಮಾವನವರು ಸ್ವಲ್ಪ ಶ್ರಮ ತೆಗೆದುಕೊಂಡು, ಸರಿಯಾದ ವಸತಿ ನೋಡಿಕೊಟ್ಟರೆ ತುಂಬಾ ಉಪಕಾರ " ಅಂದರು.

ಆದಕ್ಕೇನು ಸಾರ್ ! ಮಾಡಿಸಿ ಕೊಡ್ತೀನಿ ಎಂದು ಹೇಳಿದೆ. ಕೈ ಕುಲುಕಿ ಬೀಳ್ಕೊಟ್ಟರು.

* * * *

ನಮ್ಮ ಮಾವನವರಿಗೂ ದೀರ್ಘಪತ್ರ ಬರೆದೆ. ಸಾಹೇಬರು ಅವರು ಧರ್ಮ ಪತ್ನಿ, ಸಾಮಾನು ಎಲ್ಲವನ್ನೂ ಬಸ್ಸಿನಲ್ಲಿ ಕೂರಿಸಿ ಬಂದೆ. ರಜಾ ಮುಗಿದಮೇಲೆ, ಹದಿನೈದುದಿನಗಳ ನಂತರ ಸಾಹೇಬರು ಕೆಲಸಕ್ಕೆ ಹಾಜರಾದರು. ಮಧ್ಯಾಹ್ನ ಹೇಳಿ ಕಳಿಸಿದರು " ನಿಮ್ಮ ಮಾವನವರು ತುಂಬಾ ಶ್ರಮ ತೆಗೆದುಕೊಂಡು ಹೊಸದಾಗಿ ಕಟ್ಟಿದ್ದ ಆದರೆ ಇನ್ನೂ ಮುಗಿಯದೆ ಇದ್ದ ದನದ ಆಸ್ಪತ್ರೆ ಕೊಠಡಿ ಯಲ್ಲೇ ಬಿಡಾರಕ್ಕೆ ಅಣಿಮಾಡಿದ್ದರು. ಅವರ ಮನೆಯಿಂದಲೇ ಊಟ ತಿಂಡಿ ಸರಬರಾಜು ಮಾಡಿಸಿದರು. ದೇವರ ದರ್ಶನ, ದೇವಸ್ಥಾನದ ದರ್ಶನ ಎಲ್ಲಾ ಮಾಡಿಸಿದರು. ತುಂಬಾ ವಂದನೆಗಳು ಕಣಯ್ಯಾ " ಅಂತ ತುಂಬಾ ಒಲವಿನಿಂದ ನುಡಿದರು.

ನೀವು ಸುಖವಾಗಿದ್ದಿರಿ ಅಂದರೆ ಅಷ್ಟೇ ಸಾಕು, ಸಾರ್ ಅಂದೆ. ಹಿಂತಿರುಗಿದೆ.

* * * *

ನಮ್ಮ ಮಾವನವರು ಒಂದು ಕಾಗದ ಬರೆದರು ನಿಮ್ಮ ಸಾಹೇಬರನ್ನ ಹೊಸ ಕಟ್ಟಡದಲ್ಲಿ ಇಳಿಸಿ ಎಲ್ಲಾ ಉಪಚಾರವನ್ನು ನೋಡಿಕೊಂಡೆ. ' ಅವರು ಹೋದ ಮೇಲೆ ಕಾವಲು ಜವಾನ ಹೇಳಿದ. ರಾತ್ರಿಯೆಲ್ಲಾ ಹೊಸ ಮನೆ ಹೆಂಚಿನಮೇಲೆ ಸರಸರ ಶಬ್ದ ಆಗ್ತಾ ಇರೋದು. ನಿಶಿ ರಾತ್ರಿ ಒಂದು ದಂಪತಿಗಳಿಬ್ಬರೂ ಕಿಟ್ಟಂತ ಕಿರಿಚಿಕೊಂಡರು. ಲಾಟೀನ್ ಹಿಡಿದುಕೊಂಡು ಹೋದೆ. ಕಿಟಕೀಲಿ ನೋಡಿದೆ ಒಬ್ಬರನೊಬ್ಬರು ತಬ್ಬಿಕೊಂಡು ಮಂಚದಮೇಲೆ ನಿಂತಿದ್ದರು ಏನಾಯ್ತು ರಾಯರೇ ಅಂದೆ. ದೊಪ್ಪಂತ ಏನೋ ಬಿತ್ತಪ್ಪಾ ! ನೋಡು ಅಂದರು ಕಿಟಕೀಲಿ ತೂರಿ ಒಳಕ್ಕೆ ಹೋದೆ. ದನದ ಆಸ್ಪತ್ರೆ ಕಿಟಕಿ ಕಂಬಿಗಳೇನೂ ಇರಲಿಲ್ಲ ಒಳಕ್ಕೆ ಹೋಗಿ

ನೋಡಿದೆ. ಎಲ್ಲೂ ಏನೂ ಇರಲಿಲ್ಲ ಏನೂ ಇಲ್ಲವಲ್ಲ ಸಾರ್ ಅಂದೆ. ಅಷ್ಟು ಹೊತ್ತಿಗೆ ನನ್ನ ತಲೆಮೇಲೇ ಏನೋ ಬಿತ್ತು, ಅಲ್ಲಿಂದ ನೆಲಕ್ಕೆ ಹಾರಿತು ಓಡಿ ಹೋಯ್ತು. ಆಗ ಕಾಣಿಸಿತು ಅಳಿಲು ಅಯ್ಯೋ! ಸ್ವಾಮಿ ಅಳಿಲು ಓಡ್ತಾಇದೆ ಅಷ್ಟೇ ಅಂದೆ.


ಹೆದರಬೇಡಿ ಸುಖವಾಗಿ ನಿದ್ರೆಮಾಡಿ ಅಂತ ಧೈರ್ಯ ಹೇಳಿಬಂದೆ ಅಂತ ಹೇಳಿದ.

ತುಂಬಾ ಗಾಬರಿಯಾಗಿದ್ದರೇನೋ ಎಂದು ಕೇಳಿದೆ, ಜವಾನನನ್ನು. ಇಲ್ಲ ರಾಯರು ತುಂಬಾ ಖುಷಿಯಿಂದ ಇದ್ದ ಹಾಗಿತ್ತು. ಅಂದ ಜವಾನ.

ತುಂಬಾ ತೊಂದರೆಯಾಯ್ತೇನೋ ಅವರಿಗೆ. ನನ್ನ ಕೈಲಾದ ಎಚ್ಚರಿಕೆ ತೊಗೊಂಡೇಪ್ಪಾ ಆದರೆ ರಾತ್ರಿ ಅಳಿಲು ಬಂದು ಬಿದ್ದರೆ ಏನುಮಾಡುಕ್ಕಾಗುತ್ತೆ ಅಂತ ಬರೆದಿದ್ದರು.

* * * *

—ಪ್ರಸಾದ್.



ಗೌರವ ರಕ್ಷಾದಳದವರಲ್ಲ.
ಸಚಿವ, ಉಪಸಚಿವ, ಚಿಲ್ಲ್ರೆ ಸಚಿವ ದಳ

ಭ್ರಮ ನಿರಸನ

ದೊಡ್ಡಟ್ಟಿ ದವೂಸೆ ಅವರ ಮನೆ ಹಿತ್ತಲೂ ದೊಡ್ಡದೇ. ಸುಮಾರು ಒಂದೆಕರೆ ಇದ್ದ ಆ ಹಿತ್ತಲನ್ನು ಎರಡು ಭಾರಿ ಮಾವಿನಮರ, ಒಂದು ಹುಣಿಸೇಮರ ಇವೇ ಆಕ್ರಮಿಸಿಕೊಂಡು ಬಿಟ್ಟಿದ್ದವು.

ಹುಣಿಸೇಮರ, ಹಲಸಿನಮರ ಮನೆ ಹಿತ್ತಲಲ್ಲಿ ಕೂಡದು ಎಂಬ ಹಿರಿಯ ವಚನವನ್ನು ಕೇಳಿ ಅರಿತಿದ್ದ ದೊಡ್ಡಟ್ಟಿಯವರು, ಸ್ವತಃ ತಾವೇ ಹುಣಿಸೇಮರವನ್ನು ನೆಟ್ಟು ಬೆಳಸುವ ಸಾಹಸಕ್ಕೆ ಕೈ ಇಕ್ಕಿರಲಿಲ್ಲ. ತಾನೇ ಚಿಗರೊಡೆದ ಸಸಿ ಅದು. ನಾಳೆಯೋ ನಾಡಿದ್ದೋ ತರಿದುಬಿಡಬೇಕೆನ್ನುತ್ತಲೇ ಮುಂದೂಡಿದ ದವೂಸೆಯವರು, ಮರ ಹೂ ಬಿಟ್ಟು ಫಲ ಕೊಡುತ್ತಲೇ, ಪ್ರಕೃತಿಯೇ ಬೆಳಸಿದ ಮರದ ತಂಟೆಗೆ ಹೋಗುವುದು ಪಾಪವೆಂದು ಸುಮ್ಮನಾಗಿದ್ದರು.

ಸೋಮವಾರ ಸಂತೆ ಮುಗಿಸಿಕೊಂಡು ದೊಡ್ಡಟ್ಟಿಯವರೂ, ಸರ್ವೆಯರ್ ಶಣ್ಮುಗರೂ ಬರುತ್ತಿದ್ದಾಗ, ದಾರಿಯಲ್ಲಿ ಎಕ್ಸ್‌ಟೆಂಶನ್ ಮಣವಾಳ ನಂಜಯ್ಯನವರ ಬಿಸಿಲು ಮಳಿಗೆಯ ಮೇಲಿನ ಒಂಟಿಕೊಟಡಿಯಲ್ಲಿ ಬಾಡಿಗೆಗಿದ್ದ ಬೋರ್ಡ್ ಹೈಸ್ಕೂಲು ಡ್ರಿಲ್ ಮಾಸ್ಟರ ಮಾದಯ್ಯನವರು, ಭಾರಿ ಕುಕ್ಕೆಯೊಂದನ್ನು ಕೂಲಿಯವರ ತಲೆಯಮೇಲೆ ಹೊರೆಸಿಕೊಂಡು ಸರಸರನೆ ಹಾದುಹೋದರು. ಕುಕ್ಕೆಯೊಳಗಿಂದ ಭಾರಿಗಾತ್ರದ ಬದನೆ ಬಾಳೆ ಬೆಂಡೆಗಳು ಹೊರಗಿಣಿಕಿನೋಡುತ್ತಿದ್ದವು.

ದೊಡ್ಡಟ್ಟಿಯವರು, ಶಣ್ಮುಗರೂ ಥಟ್ಟನೆ ನಿಂತರು.

" ಏನ್ ಸರ್ವೆಯರೇ, ಸಂತೆಯೆಲ್ಲಾ ಸುತ್ತಿದರೂ ಈ ಪಾಟಿ ಬೆಂಡೆ ಬಾಳೆ ಕಾಣ್ಲೇ ಇಲ್ವೇ ! " ಅಂದರು ದೊಡ್ಡಟ್ಟಿಯವರು.

" ಓಹೋ !.... ನಿಮಗ್ಗೊತ್ತಿಲ್ಲಾನ್ನಿ ಸಮಾಚಾರ ! ನನ್ಮಗ ನೆನ್ನೆ ತಾನೆ ಹೇಳ್ದ ಪಂಚಾಯ್ತಿಯವರು ತೋಟಗಾರಿಕೆ ಹಾರ್ಟಿಕಲ್ಚರ್ ಅಂತಾರಲ್ಲ ಅದರ ಶಾಖೇನ ಇಲ್ಲೂ ತೆಗೆದಿದಾರಂತೆ. ಒಂದಂಗಲ ಭೂಮಿಯೂ ಬಂಜೆಯಾಗಿರಬಾರದಂತೆ. ಆಗ್ತಾನೆ ಭಾರತ ಭಂಗಾರವಾಗುತ್ತಂತೆ. ಮನೆ ತೊಟ್ಟೀಲಿ ಸೂರ್ಮೇಲೆ, ತಾರಸೀ ಮೇಲೆ, ತೆಂಗಿನ್ಮರದ್ಮೇಲೆ .. ಎಲ್ಲೆಲ್ಲೂ ಸಸಿ ಹಾಕಿ ತರ್ಕಾರಿ ಬೆಳೀತಾರಂತೆ. ಸೈಲೆಂಟ್ ರೆವಲ್ಯೂಷನ್ನಂತೆ...." ಅಂತ ಅಂದ್ರು ಸರ್ವೆಯರು.

" ಹಾಗೇನ್ನಿ ! ಅಂದ್ರೆ ಮಣವಾಳ ನಂಜಯ್ಯನ ಮಹಡಿಮೇಲೆ ಬೆಳೆದ ಬದನೆ ಬೆಂಡೇನೋ ಇವು ! ಪರ್ವಾಗಿಲ್ಲ ಮಾದಯ್ಯ ಸಂತೆಗೆ ಹೊರ್ಸಿಕ್ಕೊಂಡು ಹೋಗುತ್ತಿದಾನೇನೋ ! " ಅನ್ನುತ್ತಾ ದೊಡ್ಡಟ್ಟಿಯವರು ಮನೆಗೆ ಬಂದರು.

ನಂತರ ಎರಡ್ಮೂರು ದಿನ ಹಗಲೂ ಇರುಳೂ ಅವರಿಗೆ ಬದನೆ ಬೆಂಡೆ ಸೂರು ತೆಂಗಿನ್ಮರದ್ದೇ ಯೋಚನೆ.

" ಎಲ, ಮಹಡಿಮ್ಯೇಲೆ ಎಂತಾ ಬದನೆ ಬೆಳ್ದಿದಾನೆ ಮಾದಯ್ಯ ನನ್ನ ಒಂದೆಕ್ರೆ ಹಿತ್ತಲು ಒಂದು ಹುಣಿಸೇಮರ, ಎರಡ್ಮಾವಿನಮರ ಬಿಟ್ಟು ಮತ್ತೇನೂ ಇಲ್ದೆ ಬಂಜರು ಬಂಜರಾಗಿದ್ಯಲ್ಲಾ ! " ಎಂದು ಚಿಂತಿಸಿದರು.

ನಾಲ್ಕನೇದಿನ ಮುಂಜಾನೆ ದೊಡ್ಡಟ್ಟಿ ದಮಾಸೆಯವರು ಬಿಳೀ ಧೋತರ, ಜುಬ್ಬ ಧರಿಸಿ, ಶಲ್ಯ ಹೊದ್ಕೊಂಡು ಪಂಚಾಯ್ತಿ ಆಫೀಸಿಗೆ ನಡದೇ ಬಿಟ್ರು.

ತೋಟಗಾರಿಕೆ ಇಲಾಖೆಯನ್ನು ಗ್ರಾಮಾಂತರಗಳಲ್ಲಿ ಪಾಪ್ಯುಲರೈಸ್ ಮಾಡಲಿಕ್ಕೆ ಸ್ವತಃ ಅಧ್ಯಕ್ಷರೇ ನಮ್ಮೂರಿನಲ್ಲಿ ಮೊಖ್ಖಾಂ ಹೂಡಿದ್ದರು. ದೊಡ್ಡಟ್ಟಿಯವರು ಆಫೀಸಿನೊಳಕ್ಕೆ ಅಡಿ ಇಟ್ಟ ತಕ್ಷಣ ಅವರು ಎದ್ದು, ನಗುನಗುತ್ತಾ, ಕೈ ಕುಲುಕಿ ಕುರ್ಚಿಯಲ್ಲಿ ಕೂಡ್ರಿಸಿ, ತಾವೂ ಕುಳಿತು, ವಾಲಂಟರಿಯಾಗಿ ವಿಚಾರಿಸಿಕೊಂಡು ಬಂದಿದ್ದ ಅವರ ಹಿರಿಯ ಗುಣವನ್ನು ಪ್ರಶಂಸಿಸಿ, ಹಳ್ಳಿಯ ಹೀನ ಸ್ಥಿತಿಯನ್ನು ಹಳಿದು, ಇಂಗ್ಲೆಂಡ್ ಅಮೆರಿಕಾಗಳಲ್ಲಿ ಹಳ್ಳಿಗಳೇ ಇಲ್ಲವೆಂದೂ, ಅವುಗಳಿಗೆ ಹೋಲಿಸಿದರೆ ಭಾರತದೇಶ ಬಹಳ ಹಿಂದುಳಿದಿದೆಯೆಂದೂ, ನಾವೂ ಹಾಗಾಗಾಬೇಕಾದರೆ ತೋಟಗಾರಿಕೆ ಇಲಾಖೆಗಳು ಎಲ್ಲೆಲ್ಲೂ ಹರಡಬೇಕು. ಆದಿ ಅಡೆತಡೆಗಳಲ್ಲದೆ ಹೇಳುತ್ತಲಿದ್ದಾಗ, ಅವರ ವಾಗ್ವೈಖರಿಗೆ ದಿಗ್ಭ್ರಮೆಗೊಂಡಿದ್ದ ದೊಡ್ಡಟ್ಟಿಯವರು, ತಾವು ಬಂದ ಕಾರ್ಯವನ್ನು ನೆನೆಸಿಕೊಂಡು " ಬದನೆ ಬದನೇ " ಅಂದರು ತಡವರಿಸುತ್ತಾ.

" What ! ...ಬದನೇಕಾಯಿ....ಕ್ಯಾಬೇಜ್....Yes ... Yes .... ಬದನೆ, ಬೆಂಡೆ, ಕೋಸ್ ಬೀಟ್‌ರೂಟ್, ಆಲೂಗೆಡ್ಡೆ, ಈರುಳ್ಳಿ, ದಂಟು, ಚಕ್ಕೋತ.... ಎಲ್ಲ Double Quantity....ಎರಡರಷ್ಟು ಬೆಳೆ ಎರಡರಷ್ಟು " ಅಂದರು ಅಧ್ಯಕ್ಷರು.

ದೊಡ್ಡಟ್ಟಿಯವರ ಬಾಯಲ್ಲಿ ನೀರೂರಿತು. ಮಾದಯ್ಯನ ಕುಕ್ಕೆಯಲ್ಲಿ ಕಂಡ ಚಿತ್ರ ಮನದಲ್ಲಿ ಹಾದುಹೋಯಿತು. ಅಧ್ಯಕ್ಷರು ದೊಡ್ಡಟ್ಟಿಯವರನ್ನು ಪೂರ್ತಿ ಹಿಪ್ನಟೈಸ್ ಮಾಡಿದ್ದರು.

ಮುಂದಿನದೆಲ್ಲಾ ಯಾಂತ್ರಿಕವಾಗಿ ನಡೆದು ಹೋಯಿತು. ಅಧ್ಯಕ್ಷರು ಫೈಲೊಳಗಿಂದ ಮೂರುನಾಲ್ಕು ಫಾರಂಗಳೆನ್ನು ಹೊರತೆಗೆದು ದೊಡ್ಡಟ್ಟಿಯವರ ರುಜು ಮಾಡಿಸಿಕೊಂಡರು. ಸಂಘದ ಮೂಲ ಸದಸ್ಯತ್ವಕ್ಕೆ ೧೦ ರೂಪಾಯಿ, ಸಲಹೆಗಳಿಗೆ ೯ ರೂಪಾಯಿ, ಇನ್ಸ್‌ಪೆಕ್ಷನ್ನಿಗೆ ೯ ರೂಪಾಯಿ, ಸೀಡ್ಸ್ ಸಪ್ಲೈಗೆ ೪ ರೂಪಾಯಿ, ಸಂಘದ ಜರ್ನಲ್ ಚಂದಾ ೨ ರೂ ಹೀಗೆ ೩೪ ರೂಪಾಯಿಗೆ ರಸೀತಿ ಕೊಟ್ಟು, ಹಣ ಪಡೆದು ಥ್ಯಾಂಕ್ಸ್ ಎಂದರು.

ದೊಡ್ಡಟ್ಟಿಯವರ ದೈನಂದಿನದಲ್ಲೇ ಒಂದು ವಿಶೇಷ ಬದಲಾವಣೆ ಕಾಣ ಬರತೊಡಗಿತು.

ಮಾವಿನ ಮರದ ನೆರಳಿನಲ್ಲಿ ನಿಂತು ವಿಶಾಲವಾದ ತಮ್ಮ ಹಿತ್ತಲನ್ನೇ ದಿಟ್ಟಿಸುತ್ತಾ ಭವಿಷ್ಯದ ರೂಪರೇಖೆಗಳನ್ನು ಮನದಲ್ಲೇ ಮೂಡಿಸಿಕೊಡು ಆನಂದ ಪಡುತ್ತಿದ್ದ ದೊಡ್ಡಟ್ಟಿಯವರನ್ನು ನಾವು ಕಾಣಬಹುದಿತ್ತು.

ಮತ್ತೆ ಎರಡು ದಿನಗಳನಂತರ ತೋಟಗಾರಿಕಾಧ್ಯಕ್ಷರ ಸವಾರಿ ದೊಡ್ಡಟ್ಟಿಯವರ ಹಿತ್ತಲಿಗೆ ಚಿತ್ತೈಸಿತು. ದೊಡ್ಡಟ್ಟಿಯವರ ಸಂಭ್ರಮ ಹೇಳತೀರದು. ಅಧ್ಯಕ್ಷರು ತಮ್ಮೊಡನೆಯೇ ಇಲಾಖೆಯ ಕೆಲವು ಜರ್ನಲುಗಳನ್ನೂ ತಂದಿದ್ದರು. ಅದರೊಳಗಿನ ಚಿತ್ರವಿಚಿತ್ರರೀತಿಯ ತರ್ಕಾರಿಗಳ ಚಿತ್ರಗಳ ದೊಡ್ಡಟ್ಟಿಯವರ ಚಿತ್ತವನ್ನು ಸೂರೆಗೊಂಡಿತು.

ಅಧ್ಯಕ್ಷರೊಡನೆ ಇಲಾಖೆಯ ಇತರ ಕೆಲಸಗಾರರೂ ಬಂದಿದ್ದರು. ಅಧ್ಯಕ್ಷರ ಅಪ್ಪಣೆಯಾದ ಕೂಡಲೆ ಅವರುಗಳು ತಮ್ಮೊಡನೆ ತಂದಿದ್ದ ಟೇಪುಗಳಿಂದ ಹಿತ್ತಲನ್ನು ಅಳೆದರು. ಎತ್ತರ ತಗ್ಗುಗಳನ್ನು ಗುರ್ತಿಸಿ. ನೋಟ್ ಮಾಡಿಕೊಂಡರು.

"ಕೋಸು, ಟೊಮ್ಯಾಟೋ, ಕ್ಯಾರೇಟುಗಳಿಗೆ ಹುಣಿಸೇ ಗಾಳಿ ಕೂಡದು ನೆರಳೂ ಕೆಟ್ಟದೇ. ದಂಟು, ಆಲೂಗೆಡ್ಡೆ, ಈರುಳ್ಳಿ, ಕಾಬೇಜು, ಬೀಟ್‌ರೂಟ್‌ಗಳು ಬೆಳೀಬೇಕಾದರೆ ಒಳ್ಳೆ ಬಿಸಿಲಿರಬೇಕು. ಇಲ್ಲಿರೋ ಮಾವಿನಮರಗಳು ಬಿಸಿಲನ್ನೂ ತಡೆದು, ನಂ ಪ್ಲ್ಯಾಂಟ್ಸ್‌ಗೆ ಹಾಕೋ ಸೈಂಟಿಫಿಕ್ ಮೆನ್ಯೂರನ್ನೂ ಕಬಳಿಸಿ ಬಿಡುತ್ತವೆ. They should be removed" ಎಂದು ಅಧ್ಯಕ್ಷರು ಹೇಳಿದಾಗ, ದೊಡ್ಡಟ್ಟಿಯವರು ಜರ್ನೊಳಗಿನ ಬದನೆಗೂ, ಮಾದಯ್ಯನ ಹುಕ್ಕೆಯಲ್ಲಿ ಕಂಡಿದ್ದ ಬದನೆಗೂ ಹೋಲಿಸುತ್ತಿದ್ದವರು "ಅಂ....ಹೂಂ.... ಹೌದು" ಎಂದರು.

ಅದೇ ಮಧ್ಯಾಹ್ನ ಇಲಾಖೆಯ ಆರ್ಡರಿನೊಂದಿಗೆ ಹತ್ತೆಂಟು ಜನ ಕೊಡಲಿಗಳೊಡನೆ ದೊಡ್ಡಟ್ಟಿಯವರ ಹಿತ್ತಲನ್ನು ಹೊಕ್ಕಿದರು. ದೊಡ್ಡಟ್ಟಿಯವರು ನೋಡುನೋಡುತ್ತಿರುವಂತೆಯೇ ಅವರ ಕಣ್ಮುಂದೆ ಬೆಳದಿದ್ದ ಹುಣಿಸೆ ಮಾವಿನ ಮರಗಳಿಗೆ ಕೊಡಲಿಯ ಏಟು ಬೀಳತೊಡಗಿತು. ದೊಡ್ಡಟ್ಟಿಯವರಿಗೂ ಒಂದು ನಿಮಿಷ ಅಯ್ಯೋ! ಎನ್ನುವ ಹಾಗೆ ಆಯಿತು. ಆದರೆ ಮರುಕ್ಷಣದಲ್ಲಿಯೇ ಭವಿಷ್ಯದ ಮಾಯಾಮೋಹಿನಿ ಅವರ ಅಂತರಾಳದಲ್ಲಿ ಏಳುತ್ತಿದ್ದ ಕರುಣಾಕ್ರಂದನವನ್ನು ಅಲ್ಲೇ ಅದುಮಿಬಿಟ್ಟಿತು.

ಮಾವು ಹುಣಿಸೆಗಳ ಉಚ್ಚಾಟನೆಯಾದಮೇಲೆ ದೊಡ್ಡಟ್ಟಿಯವರ ಹಿತ್ತಲು ಮತ್ತೂ ವಿಶಾಲವಾಗಿ ಬಯಲು ಬಯಲಾಗಿ ಕಾಣತೊಡಗಿತು. ಅಧ್ಯಕ್ಷರ ಅಪ್ಪಣೆಯ ಪ್ರಕಾರ ದೊಡ್ಡಟ್ಟಿಯವರು ಇಲಾಖೆಗೆ ೧೦ ರೂಪಾಯಿ ಪಾವತಿ ಮಾಡಿ, ಅವರ ಟ್ರ್ಯಾಕ್ಟರಿನಿಂದ ಹಿತ್ತಲನ್ನು ಪೂರ್ತಿ ಉಳಿಸಿದರು. ಮುಖ್ಯ ಇಲಾಖೆಗೆ ಇವರು

ಕೊಟ್ಟಿದ್ದ ಅರ್ಜಿ ಮಂಜೂರಾಗಿ ೮೦ ರೂಪಾಯಿಗೆ ನಾಲ್ಕು ಮೂಟೆ ಸೈಂಟಿಫಿಕ್ ಮೆನ್ಯೂರ್ ಇವರ ಹಿತ್ತಲಿಗೆ ಬಂದು ಬಿದ್ದಿತು.

ದಿನವೂ ಬೆಳಗ್ಗೆ - ಮಧ್ಯಾಹ್ನ - ಸಂಜೆ ಈ ಗೊಬ್ಬರದ ಮೂಟೆಗಳ ಮೇಲೆ ಕುಳಿತು ಅದೇನೋ ಯೋಚಿಸುತ್ತಿರುವ ಭಾವ ಸಮಾಧಿಸ್ಥರಾದ ದೊಡ್ಡಟ್ಟಿಯವರನ್ನು ಕಾಣಬಹುದು.

ಇಲಾಖೆಗೆ ಸದಸ್ಯರಾಗಿ ದೊಡ್ಡಟ್ಟಿಯವರು ಎರಡು ತಿಂಗಳು ಇಪ್ಪತ್ತು ದಿನ ಕಳೆಯಿತು. ಹಿತ್ತಲಿನ ಉತ್ತ ನೆಲ ಬಿತ್ತುವುದನ್ನೇ ಕಾಯುತಿತ್ತು.

" ಪಾತಿ ಮಾಡಿಸಬೇಕು, ಗೊಬ್ಬರ ಎರಚಿಸಬೇಕು, ಬಿತ್ತೋಕೆ ಬೀಜಗಳನ್ನು ತರಬೇಕು " ಎಂದು ಏನೇನೋ ಯೋಚಿಸುತ್ತಾ ದೊಡ್ಡಟ್ಟಿಯವರು ಪಂಚಾಯ್ತಿ ಆಫೀಸನ್ನು ಹೊಕ್ಕರು. ಆಫೀಸಿನೊಳಗೆ ಹೊಸದಾಗಿ ಗಾಜಿನ ಬೀರುವೊಂದು ಬಂದಿದ್ದಿತು. " ಅದೇನಾದ್ರೂ ಇರಲಿ, ಮೊದಲು ಹಿತ್ತಲ ವಿಷ್ಯ " ಎನ್ನುತ್ತಾ ಅಧ್ಯಕ್ಷರಿಗೆ ಕೈ ಮುಗಿದರು ದೊಡ್ಡಟ್ಟಿಯವರು.

" ಹಲೋ, ಬನ್ನಿ... ನೋಡಿ.... ಆಫೀಸ್ಗೆ ಹೊಸಾ show case ಬಂದಿದೆ ....ಪ್ರದರ್ಶನಕ್ಕೆ " ಅಂದರು ಅಧ್ಯಕ್ಷರು.

" ಇರಲಿ ಸಾರ್, ನೀವ್ ಹೇಳ್ದಾಗೆ ಎಲ್ಲಾ ಉತ್ತಿಸಿಯಾಯಿತು ಗೊಬ್ಬರ ಬಂದಿದೆ. ಇನ್ನು ಪಾತಿಮಾಡಿಸಿ ಬಿತ್ತೋಣವೇ " ಅಂದ್ರು ದೊಡ್ಡಟ್ಟಿಯವರು.

" ಹೌದು... ಹೌದು.... ಆದರೆ . " ತಡೆವರಿಸಿದವರು ಅಧ್ಯಕ್ಷರು.

" ಏನ್ಸಾರ್ ಅದ್ರೆ ?! " ಗಾಭರಿಯಿಂದ ಕೇಳಿದರು ದಮಾಸೆಯವರು. ಮುಂದೇನೋ ಎಂಬ ಯೋಚನೆ ಅವರದು.

" ನೋಡಿ Mr. ದಮಾಸೆ, ಸಸಿಗಳಿಗೆ ನೀರ್ಹಾಕೋಕೆ ಒಂದು ಭಾವಿಬೇಕು. ಒಂದು ಪಂಪ್ ಸೆಟ್ಟೂ.... ನಿಂದೇನ್ small plot ಏ? ನಂ ಇಲಾಖೆ ಪ್ರೆಸ್ಟೀಜ್ ಪ್ಲಾಟ್ ಅಂದ್ರೆ ನಿಂ ಹಿತ್ತಲೇ...."

" ಮನೆ ಒಳಗೇ ಒಂದು ಬಾವಿ ಇದೆಯಲ್ಲಾ ಸಾರ್ ! " ಅಂದ್ರು ದೊಡ್ಡಟ್ಟಿಯವರು ದೈನ್ಯತೆಯಿಂದ.

" ಅದೆಲ್ಲಾ . ಹಾಗಲ್ಲಾ ಆಗೊಲ್ಲ Mr. ದಮಾಸೆ. ಮನೆ ಒಳಗಿನ ಬಾವೀದೇನ್ ಸೆಕ್ಯೂರಿಟಿ?.... ತೋಟಕ್ಕೇ ಎಕ್ಸ್ಕ್ಲುಸಿವಾಗಿ ಬಾವಿ ಪಂಪ್ ಸೆಟ ಬೇಕೇ ಬೇಕು. ಇಲಾಖೆ ರೂಲ್ಸ್ ಒಳ್ಗೇ ಅದೂ ಬಂದ್ಬಿಡುತ್ತಲ್ಲಾ ! " ಅನ್ನುತ್ತಾ ದಮಾಸೆಯವರು ಸಹಿಹಾಕಿದ ಫಾರಂಗಳನ್ನು ಹೊರತೆಗೆದರು.

" ಹಾಗಾದರೆ ಏನ್ಮಾಡೋದು ಸ್ವಾಮಿ ? " ದೊಡ್ಡಟ್ಟಿಯವರ ಪ್ರಶ್ನೆ.

" ಏನಿಲ್ಲ!.. ನಾಳೆ ಒಂದರ್ಜಿ ಕೊಡಿ. ಬಾವಿ ಪಂಪ್ ಸೆಟ್‌ಲೋನ್‌ಗೆ. ಎರಡೂಸೇರಿ ಮೂರ್ನಾವಿರದೈನೂರೂ ಆಗುತ್ತಷ್ಟೆ ಕಂತ್ರಾಕಾರತೀರ್ಸಿಬಹುದು. ಆದಾದ್ರೆ ತೋಟ ಆದಂತೆಯೋ " ಎನ್ನುತ್ತಾ ನಿರಾಶೆಯಲ್ಲಿ ಆಸೆಯನ್ನು ತುಂಬುವ ಪ್ರಯತ್ನ ಮಾಡಿದರು ಅಧ್ಯಕ್ಷರು.

ಮಾರನೆಯ ಮುಂಜಾನೆ ದೊಡ್ಡಟ್ಟಿ ದಮಾಸೆಯವರು ಬಾವಿ ಪಂಪ್ ಸೆಟ್ಟಿಗೊಂದರ್ಜಿ, ಇನ್ನೂ ನಾಲ್ಕು ಮೂಟೆ ಸೀಮೆ ಗೊಬ್ಬರಕ್ಕೆ ಪ್ರಾರ್ಥನೆ, ಮತ್ತು ಇಲಾಖೆಯ ಜರ್ನಲುಗಳು ಆದಿ ಎಲ್ಲವೂ ಇದ್ದ ಫೈಲಿನೊಡನೆ ಆಫೀಸಿನೊಳ ಹೊಕ್ಕರು. ಅಧ್ಯಕ್ಷರು ಕುರ್ಚಿಯಲ್ಲಿ ಆಸನ್ನರಾಗಿದ್ದರು.

ದೊಡ್ಡಟ್ಟಿ ದಮಾಸೆಯವರು ಆಫೀಸಿನೊಳಕ್ಕೆ ಕಾಲಿರುಸುತ್ತಲೇ ತಮ್ಮ ದೃಷ್ಟಿಯನ್ನು show case ನತ್ತ ಹರಿಸಿದರು. ಅದರೊಳಗಿರಿಸಿದ್ದ ಬದನೆ, ಬೆಂಡೆ, ಬಾಳೆಗಳನ್ನು ನೋಡಿ ದಿಗ್ಭ್ರಮೆಗೊಂಡರು.

ಭವಿಷ್ಯತ್ತಿನ ಫಲ ಸ್ವರೂಪವೇ ಮೂರ್ತಿ ಮತ್ತಾಗಿ ದಮಾಸೆಯವರ ಕಣ್ಣು ಕಟ್ಟಿತು. ಅದಕ್ಕಾಗಿಯೇ ಅವರ ಹಂಬಲ. ಅದಕ್ಕಾಗಿಯೇ ಮಾವು ಹುಣಿಸೆಗಳ ಮರ್ದನ ಅದಾಕ್ಕಾಗಿಯೇ....

ದಮಾಸೆಯವರು ಬಿರುಗಣ್ಣಿನೊಡನೆ ಬೀರುವನ್ನೇ ನೋಡುತ್ತಾ " ಬದನೇ ! ಬೆಂಡೆ !!.... ಬಾಳೆ !!! " ಎಂದರಚಿದರು. ಅತೃಪ್ತ ಆಕಾಂಕ್ಷೆಯು ಅವರ ಧ್ವನಿಯಲ್ಲಿ ಸ್ಪಷ್ಟವಾಗಿ ವ್ಯಕ್ತವಾಗಿದ್ದಿತು.

" ಕುಳಿತುಕೊಳ್ಳಿ Mr. ದಮಾಸೆ, ಅವೇ ನೋಡಿ....ನಿಮ್ಮ ಬೋರ್ಡ್ ಸ್ಕೂಲಿನ ಡ್ರಿಲ್ ಮೇಷ್ಟ್ರುದಾರಲ್ಲ .. ಮಾದಯ್ಯ !... he is a good artist too ! .. show case ಗೆ ಬದನೆ, ಬಾಳೆ, ಬೆಂಡೆ etc model ಗಳನ್ನೆಲ್ಲಾ.... ನಂ. ಇಲಾಖೆಗೆ... ಅವಂದೇ ಸಪ್ಲೈ. ಈಗಾಗಲೇ ಒಂದೆರಡ್ಸಾವರ ರೂಪಾಯಷ್ಟು ಜಾಬ್ ಮಾಡಿಕೊಟ್ಟಿದಾನೆ...." ಇನ್ನೂ ಏನೇನೋ ಅಧ್ಯಕ್ಷರು ಹೇಳುತ್ತಲೇ ಇದ್ದರು. ದೊಡ್ಡಟ್ಟಿ ದಮಾಸೆಯವರು ಮಾತ್ರ ಒಂದುಕ್ಷಣ ಅಲ್ಲಾಡದೆ.... ಅಚಲರಾಗಿ .. ಮತಿಭ್ರಮಣರಾದವರಂತೆ ನಿಂತುಬಿಟ್ಟರು. ಮರುಕ್ಷಣದಲ್ಲಿ ಚೇತರಿಸಿಕೊಂಡು ತಮ್ಮ ಕೈಯಲ್ಲಿದ್ದ ಫೈಲನ್ನು ಅಧ್ಯಕ್ಷರ ಮುಖದಮೇಲೆಸೆದು ಓಡೋಡಿ ಮನೆಗೆ ಬಂದರು. ಹಿತ್ತಲಿಗೆ ಹೋದರು ಹಿಂದಿನ ಮಾವು ಹುಣಿಸೆಗಳನ್ನು ನೆನೆನೆದು ಅತ್ತರು.

—ಕೊಳ್ಳೇಗಾಲದ್ನಾರಾಮಾನುಜ

ಗರುಡಾ, ಗುಬ್ಬಚ್ಚಿ ಇತ್ಯಾದಿ

ಕುದುರೆ ಕೊಂಬನ್ನಾದರೂ ತರಬಹುದು, ಆದರೆ ನಮ್ಮ ರಾಜಧಾನೀಲಿ ಮನೇನ ದೊರಕಿಸಿಕೊಳ್ಳೋದು ಅಸಾಧ್ಯ, ಎಂದು ಹಳ್ಳಿಯ ಹತ್ತೂ ಸಮಸ್ತರು ನನಗೆ ಹುಷಾರು ಕೊಟ್ಟಿದ್ದರು. ದೇವರಿದ್ದಾನೆ ನೋಡಿಕೋತಾನೆ ಎನ್ನೋ ಧೈರ್ಯ ದಿಂದಲೇ ಹೊರಟಿದ್ದೆ.

ರಾಜಧಾನಿಗೆ ಹೋದಕೂಡಲೇ, ರೈಲು ನಿಲ್ದಾಣದಲ್ಲಿ ಕೂಲಿಗಳ ಹಾವಳಿ ಕಂಡಾಗಲೇ ಎದೆ ಝುಗ್ ಅಂದಿತು. ಒಂದು ತರಹಾ ಆಯಿತು, ಹೊಟ್ಟೇಲಿ. ಸಂಕಟ ಶುರುವಾಯ್ತು ಇರೋದು ಹತ್ತು ಹನ್ನೆರಡು ರೂಪಾಯಿ. ಕೆಟ್ಟು ಪಟ್ಟಣ ಸೇರು ಅಂತ ರಾಜಧಾನಿಗೆ ಬಂದಿದ್ದೆ ಒಂದು ವಾರದಲ್ಲಿ ದೊಡ್ಡ ಷಹರು, ಯಾವುದಾದರೂ ಕೆಲಸ ಸಿಗುಲ್ವೇ! ಅನ್ನೋ ಧೈರ್ಯ. ಅಲ್ಲದೆ ನನ್ನ ಅಂಗೈಯನ್ನ ನಾನೇ ನೋಡಿಕೊಂಡಿದ್ದೆ ಗೃಹ ಲಾಭ, ವಾಸಸ್ಥಾನ ದೊರಕಲೇಬೇಕು ಧನರೇಖೆ ಪಕ್ಕದಲ್ಲೇ ಗೃಹರೇಖೆ ಡಿಖಾವಾಗಿ ಕಾಣಿಸಿಕೊಳ್ಳುತ್ತಿತ್ತು. ಇಷ್ಟೆಲ್ಲಾ ಇದ್ದಾಗ ನಾನುಯಾಕೆ ಹೆದರಲಿ ಅಂತಿದ್ದೆ ಆದರೆ, ಆದರೆ ಈ ರಾಕ್ಷಸ ರೈಲು ನಿಲ್ದಾಣದಲ್ಲಿ ಇಳಿದಾಗ, ಈ ಯಮಘಾತುಕರು, ಸಾಮಾನಿನೊಂದಿಗೆ ನನ್ನನ್ನೂ ಎಳೆದಾಡಿದಾಗ, ಎದೆ ಹಾರಿತು, ಮನಸ್ಸು ಬೆಚ್ಚಿತು. ಕರುಳು ಕಚ್ಚಿತು.

ಅಷ್ಟೇ ನನಗೆ ಜ್ಞಾಪಕ.

ಎಚ್ಚರವಾದಾಗ ರೈಲ್ವೆಸ್ಟೇಷನ್ನಿನ ಪ್ಲಾಟ್‌ಫಾರಂನಲ್ಲೇ ಮಲಗಿದ್ದೆ ಯಾರೋ ತಲೆಗೆ ನೀರು ತಟ್ತಾ ಇದ್ದರು. ಕೈಯಲ್ಲಿ ಬೀಗದ ಕೈಗೊಂಚಲಿತ್ತು ರೈಲ್ವೆಸ್ಟೇಷನ್ ಮಾಸ್ತರ್ ಉಡುಪು ಧರಿಸಿದ್ದ ಒಬ್ಬಾತ "ಈಗ ಸ್ವಸ್ಥವಾಗಿದೀಯಾ? ಎದ್ದು ಕೂತು ಕೊಳ್ಳಲಿಕ್ಕೆ ಆಗುತ್ತಾ" ಎಂದು ಕೇಳ್ತಿದ್ದ.

ಅವರನ್ನು ನೋಡಿ, "ಪುಂಗನಾಯಕನ ಹಳ್ಳಿಯಿಂದ ಟಿಕೆಟು ಕೊಂಡುಬಂದೆ, ಟಿಕೆಟ್ ಸೊಂಟದಪಟ್ಟೀಲಿ ಇದೆ ತೆಕ್ಕೊಡತೀನಿ, ತಡೀರಿ," ಎಂದು ಕೂತು ಕೊಳ್ಳುಕ್ಕೆ ಹೋದೆ. ಪಕ್ಕದಲ್ಲೇ ನೀರು ತಟ್ಟುತ್ತಿದ್ದಾತ, "ಏಳಬೇಡಿ, ತಲೆ ತಿರುಗಬಹುದು ಇನ್ಜಕ್ಷನ್ ಕೊಟ್ಟಿದ್ದೀನಿ, ಇನ್ನೊಂದು ಸ್ವಲ್ಪ ಹೊತ್ತಿನಲ್ಲಿ ಎಲ್ಲಾ ಸರಿಹೋಗುತ್ತೆ," ಎಂದ. ಓಹೋ! ಇವರು ರೈಲ್ ಡಾಕ್ಟರಿರಬಹುದು. ನನಗೆ ಜ್ಞಾನ ತಪ್ಪಿದ್ದಿರಬೇಕು ಎಂದು ಸರಿಯಾಗಿ ಊಹಿಸಿದೆ ಸಾಮಾನುಗಳು!

ಛಟ್ಟಂತ ಕೂತೆ. "ಅಯ್ಯಯ್ಯೋ! ನನ್ನ ಸಾಮಾನು, ಬಟ್ಟೆಬರೆ ಗಂಟು ಎಲ್ಲಾ ಹೋಗಿಬಿಡ್ತಲ್ಲಪ್ಪಾ ಅಂತ ಲಬೋಬಲೋ ಮಾಡಿದೆ. ಎದ್ದೆ. ರೈಲ್ವೆ ಡಾಕ್ಟರು

ಜಗ್ಗಿ ಕೂರಿಸಿದರು. ನಿನ್ನ ಸಾಮಾನು ಗಂಟುಮೂಟೆ ಎಲ್ಲಾ ಕ್ಷೇಮವಾಗಿವೆ. ನೀನೇ ಮೂರ್ಛೆ ಹೋದೋನು ಅವನ್ನೆಲ್ಲಾ ಈ ಮೂಲೇಲಿರಿಸಿಟ್ಟಿದೀವಿ ನೋಡು ಎಂದು ತೋರಿಸಿದರು. ಎಲ್ಲಾ ಅಲ್ಲೇ ಇತ್ತು. ಒಂದು ಬುಟ್ಟಿ, ಒಂದು ಹಳೆ ಬಟ್ಟೆಗಂಟು, ಒಂದು ತಗಡಿನ ಟ್ರಂಕು. ಮೆಲ್ಲಗೆ ಸೊಂಟದ ಪಟ್ಟಿಯಮೇಲೆ ಕೈ ಯಾಡಿಸಿದೆ. ಹಣವೆಲ್ಲಾ ಅಲ್ಲೇ ಇದ್ದಹಾಗೆ ತೋರಿತು. ನೋಟುಗೀಟು ಎಂದರೆ ಯಾವಾಗಲೂ ನನಗೆ ಅನುಮಾನ. ಅದಕ್ಕೇ ನಾಣ್ಯಗಳನ್ನೇ ಇಟ್ಟಕೊಂಡಿರೋ ಪದ್ಧತಿ. ಹಾಗೂ ಡಾಕ್ಟರು ಚಿಕಿತ್ಸೆಮಾಡ್ತಾ ಇದ್ದಾರೆ, ನನಗೆ ಜ್ಞಾನ ತಪ್ಪಿತ್ತು ಅಂದಮೇಲೆ, ಸೊಂಟದ ಪಟ್ಟೀನ ತನಿಖೆಮಾಡಿಕೊಳ್ಳೋದು ಜಾಣತನ. ನಮ್ಮ ಹಳ್ಳೀಲಿಕೂಡ ಡಾಕ್ಟರು, ಇಂದ್ರಜಾಲ, ಮಹೇಂದ್ರಜಾಲ ಕಲಿತಿದ್ದಾರೆ. ಯಾವ ಮಾಯದಲ್ಲೋ! ಯಾವ ನೆಪದಲ್ಲೋ, ನಮ್ಮ ಜೋಬುಗಳನ್ನೆಲ್ಲಾ ಖಾಲಿಮಾಡಿ ಬಿಡ್ತಾರೆ. ಅಂದಮೇಲೆ ಷಹರು ಡಾಕ್ಟರುಗಳು ಜೇಬನ್ನೇ ಮಾಯಮಾಡಿಬಿಡ್ತಾರೆ ಅಂತ ನಮಗೆ ಭಯ ಹಳ್ಳೀಲಿ. ಅದಕ್ಕೇ ಸೊಂಟದ ಪಟ್ಟೀಲಿ ಚೀಲಮಾಡಿಸಿ ಇದ್ದ ಬದ್ದ ನಾಣ್ಯಾನ ಅದರಲ್ಲಿಡೋ ಅಭ್ಯಾಸ.

ಈಗ ಪರವಾಗಿಲ್ಲ ಸಾರ್! ಹುಷಾರಾಗಿದೀನಿ. ಬಿಟ್ಟರೆ ಹೋಗ್ತೀನಿ ಎಂದು ಸ್ಟೇಷನ್‌ಮಾಸ್ತರ ಕಡೆಗೆ ನೋಡಿ ಹೇಳಿದೆ. ಸೊಂಟದಿಂದ ತೆಗೆದಿದ್ದ ಟಿಕೇಟನ್ನು ಅವರ ಕೈಗೆ ಕೊಡುತ್ತ. ಅವರಂದರು ಎಲ್ಲಿ ನೀವು ಉಳಕೊಳ್ಳೋದು ಒಂದು ಟಾಂಗಾ ಮಾಡಿ ಕಳಿಸ್ತೀವಿ ಅಂತ. ನಾನಂದೆ, ಊರೊಳಕ್ಕೆ ಹೋದಮೇಲೆ ಕಂಡುಹಿಡೀಬೇಕು ಅಂತ. ನೀವಿನ್ನೂ ಬಿಳಿಚುಕೊಂಡಿದ್ದೀರಿ, ಇಲ್ಲೇ ಹತ್ತಿರ ಒಂದು ಆಸ್ಪತ್ರೆ ಇದೆ. ಅಲ್ಲಿಗೆ ಹೋಗಿ ಈ ರಾತ್ರಿ ಸುಧಾರಿಸಿಕೊಳ್ಳಿ. ಅಲ್ಲಿಗೆ ಕರಕೊಂಡು ಹೋಗಿಬಿಡು ಅಂತ ಟಾಂಗಾದವನಿಗೆ ಹೇಳ್ತೀನಿ ಎಂದು ಹೇಳಿದರು ಆಗಬಹುದು ಅಂತ ನಾನೇನು ಅನ್ನಲಿಲ್ಲ. ಆದರೂ ಪೀಡೆ ಬೇಗಕಳೀಲಿ ಅಂತ ಅವರೇ ಒಬ್ಬ ಟಾಂಗಾದವನ ಜತೆಗೆ ನನ್ನನ್ನೂ ಹೊರಕ್ಕೆ ಸಾಗ ಹಾಕಿದರು ನೀವು ಮಾಡಿದ್ದೂ ನ್ಯಾಯ ಅಂತ ರೈಲ್ವೆ ಡಾಕ್ಟರು, ಸ್ಟೇಷನ್‌ಮಾಸ್ತರನ್ನು ಹೊಗಳಿದ್ದೂ ಕೇಳಿಸಿತು, ನಾನು ಹೊರಬಿದ್ದಾಗ.

ಆಸ್ಪತ್ರೇ ವರಾಂಡಾದ ಪಕ್ಕದಲ್ಲಿ ನನ್ನನ್ನ ಆ ರಾತ್ರಿ ಮಲಗಿಸಿದರು. ಎರಡೇ ದಿವಸದಲ್ಲಿ ಅಲ್ಲಿನ ಆಧಾನ ನಿಧಾನ ತಿಳಕೊಂಡೆ. ಮನೆ ಸಿಗೋತನಕ ಇಲ್ಲೇ ಠಿಕಾಣಿ ಹಾಕೋದು ನನ್ನ ಮೈಗೆ ಒಳ್ಳೆಯದು, ನನ್ನ ಜೇಬಿನ ಜರೂರು ಪರಿಸ್ಥಿತಿ ಯಲ್ಲಿ ಅವಶ್ಯಕ ಎನ್ನಿಸಿತು. ಗುಡಿಸುಕ್ಕೆ ಬಂದೋಳು ಸ್ವಲ್ಪ ಇತ್ತಬಾ ಗುಡಿಸಿ ಕೊಂಡು ಹೋಗಬೇಕು ಅಂತ ಗರ್ಜಿಸಿದಳು " ಏನು ಕಂಠಾಮ್ಮ ನಿನಗೆ! ಸಂಗೀತ ಕಚೇರಿ ಮಾಡೋದು ಬಿಟ್ಟು ಇಲ್ಲಿಗೆ ಬಂದಿದ್ದೀಯೆಲ್ಲಾ ಪರಕೆಹಿಡಕೊಂಡು ಎಂದೆ. ಹಂಗಂತೀಯಾ ಹಾಡುಕ್ಕೆ ಕಲೀಲಾ ಎಂದಳು. ಪ್ರಸನ್ನಳಾದಳು. ಬೇಕಾರ ನಿನ್ನ ಕೈ ನೋಡಿ ಹೇಳ್ತೀನಿ ಅಂದೆ. ಪರಕೇನಬಿಟ್ಟು, ನನ್ನ ಕೈಗೆ ತನ್ನ ಕೈನ ಕೊಟ್ಟಳು.

ಮೂರು ವರುಸದಿಂದ ನಿನ್ನ ಅದೃಷ್ಟ ಖುಲಾಯಿಸ್ತಾ ಇದೆ. ಇಷ್ಟರಲ್ಲೇ ನಿನಗೆ ವಾಹನ ಯೋಗ ಇದೆ ಅಂದೆ. ಹಿಗ್ಗಿ ಹೋದಳು ಏನಾಗ್ಯೆತೆ ನಿನಗೆ ಆಸ್ಪತ್ರೆಗೆ ಬಂದು ಸೇರಿಕೊಳ್ಳುಕ್ಕೆ ಅಂತ ಕೇಳಿದಳು. ಇದ್ದ ವಿಚಾರಾನಾ ಸತ್ಯವಾಗಿ ಹೇಳಿದೆ. ಹಂಗಾ! ಲಕ್ಕನ್ನ ಕಳಿಸ್ತೇನಿ. ಅವ ಎಲ್ಲಾ ಸರಿಮಾಡ್ತಾನೆ ಅಂದಳು. ಕಸಪರಿಕೆ ತಕ್ಕೊಂಡು, ಗುಡಿಸಲೂ ಇಲ್ಲ ಏನೂ ಇಲ್ಲ, ಹೊರಟೇಹೋದಳು.

ಸ್ವಲ್ಪ ಹೊತ್ತಿನಲ್ಲೇ ಗಿರಿಜಾಮೀಶೆ ಹೊತ್ತ ಲಕ್ಕಪ್ಪ ಬಂದ. ಆಸ್ಪತ್ರೆ ಕಾವಲು ಗಾರರ ತಂಡದ ನಾಯಕ ಅವ. ಬೋರಿ ಕೈನೋಡಿ ಭವಿಷ್ಯ ಹೇಳ್ದಿರಂತೆ, ಹೌದಾ ಎಂದ ಹ್ದೂ ಅಂತ ತಲೆಯಾಡಿಸಿದೆ. ಹಂಗಾರ ಇದ್ದೂವೆನೋಡಿ ಅಂದ. ಅವನ ಅಂಗೈನೋಡಿ, ಸುಳ್ಳಿನ ಜೋಮಾಲೆಸರ ಪೋಣಿಸಿದೆ. ಹಿಗ್ಗಿಹೋದ, ಇಲ್ಲೇ ಇರಿ ನಿಮಗೊಂದು ಮಂಚ ಹಾಕಿಸ್ಕೊಡ್ತೇನಿ. ಊಟತಿಂಡಿ ಚೆಂದಾಗಿ ಸಿಗೋಹಾಗೆ ಮಾಡ್ತೇನಿ. ಆದರೆ ನಾನು ಯಾರನ್ನ ಕರಕೊಂಡು ಬಂದರೂ ಕೈ ನೋಡಿ ಹೇಳಬೇಕು ಅಂದ. ಅದಕ್ಕೇನಪ್ಪಾ! ಆದರೆ ನನ್ನ ಕೈಯೂ ಬೆಚ್ಚಗಾಗ ಬೇಕಲ್ಲಪ್ಪಾ! ಇಲ್ಲೇನೋ ಊಟ ಬಟ್ಟೆ ಕೊಡ್ತೀರಿ. ಎಂದಾದರೂ ಒಂದು ದಿನ ಮುಪ್ಪಾದಾಗ ಹೊರಗೆ ಕಳಿಸ್ಬಿಡ್ತೀರಿ ಆಗ ನೆರವಾಗುಕ್ಕೆ ಏನಾದರೂ ಮಡಕ್ಕೋ ಬೇಡವಾ ಎಂದೆ. ಬಂದು ಕೈ ನೋಡಿದರೆ ಒಂದು ಗುಬ್ಬಚ್ಚಿ ನಿನಗೆ ಅಂದ. ಗುಬ್ಬಚ್ಚಿ! ಹಾಗಂದರೆ? ಎಂದೆ. ಅದೂ ತಿಳೀದಾ ಹಳ್ಳಿಮುಕ್ಕ, ನಮ್ಮ ಆಸ್ಪತ್ರೆಯಾಗ, ಗುಬ್ಬಚ್ಚಿ ಅಂದರೆ ಒಂದು ರೂಪಾಯಿ. ಕಾಗೆ ಅಂದರೆ ಐದು ರೂಪಾಯಿ ನೋಟು ಗಿಡಗ ಅಂದರೆ ಹತ್ತು ರೂಪಾಯಿ ನೋಟು, ಗರುಡ ಅಂದರೆ ನೂರರ ಹಸಿರು ನೋಟು. ನಾವೆಲ್ಲಾ ಕಾಗೆ ಗುಬ್ಬಚ್ಚೀನೇ ಕಾಣೋದು, ನರ್ಸು ಗಳು ಗಿಡಗನ್ನ ಹಿಡೀತಾರೆ, ಗರುಡ, ಡಾಕ್ಟರಪಾಲಿಗೆ. ಅಂತ ವಿಶದೀಕರಿಸಿದ.

ತೊಗೊಳ್ಳಿ ಅವತ್ತಿನಿಂದ ಆಸ್ಪತ್ರೇಲೆ ಠಿಕಾಣಿ ನನ್ನದು ದಿನಕ್ಕೆ ಏನಿಲ್ಲಾ' ಅಂದರೂ 10–12 ಗುಬ್ಬಚ್ಚಿ ಹಿಡೀತಿದ್ದೆ. ಲಕ್ಕಪ್ಪ ಏನಿಲ್ಲ ಅಂದರೂ ಐದಾರು ಕಾಗೆ ಹಿಡೀತಿದ್ದ ಅಂತ ನನಗೆ ಅನುಮಾನ. ನಾನು ಕೇಳೋ ಹಾಗಿಲ್ಲ ಅವ ಹೇಳುಕ್ಕೆ ಸಿದ್ಧವಿಲ್ಲ. ಸಹಬಾಳ್ವೆ ನಡಿಸ್ತಿದ್ವಿ. ಮೋಜುಜೀವನಾ ಮಾಡ್ತಾ ಇದ್ದೆ, ಹೀಗೆ ಇರುತ್ತಾ, ಕಾಲ? ದೊಡ್ಡ ಡಾಕ್ಟರ ಹತ್ತಿರ ಒಬ್ಬ ರೋಗಿ ಹೋಗಿ ಚಾಡಿ ಹೇಳ್ಬಿಟ್ಟ. "ಹೀಗೆ ಹೀಗೆ ಪರಿಣಾಮಶೂಲೆ ಅಂತ ಆಸ್ಪತ್ರೆಗೆ ಬಂದೆ. ಆಪ ರೇಷನ್ ಮಾಡಾರು ನಿಂಗೆ ಮೊದಲು ಕೈತೋರಿಸ್ಕೋ ಅಂತ ಆಸ್ಪತ್ರೆ ಅತ್ತಕಡೆ ವರಾಂಡಾಕ್ಕೆ ಕರಕೊಂಡು ಹೋದರು ಒಂದು ಗುಬ್ಬಚ್ಚಿ, ಒಂದು ಕಾಗೆ ಫನಾ ಆಯ್ತು. ಅಲ್ಲಿ ಅವ ಕೈನೋಡಿ ಹೇಳಿದ ಇಲ್ಲೇ ಆಪರೇಷನ್ ಮಾಡಿಸ್ಕೋ ನೀನು ಒಂದು ಗರುಡನ ಕೈ ಬಿಡು. ಇಲ್ಲದೆ ಇದ್ದರೆ ಸತ್ತುಹೋಗ್ತಿ ಅಂದ. ನನ್ನ ಹತ್ತಿರ ಗರುಡ ಇಲ್ಲವಲ್ಲ ಅಂದೆ. ಹಂಗಾರ ಬೇರೆ ಆಸ್ಪತ್ರೆಗೆ ಹೋಗು ಅಂದ್ಬಿಟ್ಟ. ಇದೇನು ಸ್ವಾಮಿ, ಧರ್ಮದ ಸರ್ಕಾರಿ ಆಸ್ಪತ್ರೆ ಇದು. ಬದುಕಿರೋವಾಗಲೇ, ಗುಬ್ಬಚ್ಚಿ,

ಕಾಗೆ, ಗಿಡಗ ಗರುಡ ಅಂತ ಕಿತ್ತುಕೊಂಡು ತಿಂತೀರಿ! ಸುಮ್ಮಗೆ ಸುಖವಾಗಿ ಸಾಯುಕ್ಕೆ ಬಿಡಬಾರದೆ ಅಂತ ಕೇಳಿಯೇಬಿಟ್ಟ. ಆಮೇಲೆ ಗೊತ್ತಾಯ್ತು ಅವನ ಹೆಂಡತಿ ಅವನ್ನ ಬಿಟ್ಟು ಓಡಿಹೋಗಿದ್ದಳು. ಅದರ ಪರಿಣಾಮವಾಗಿ ಈ ಶೂಲೆ ಅವನಿಗೆ ಬಂದಿತ್ತು ಅಂತ. ದೊಡ್ಡ ಡಾಕ್ಟರ ಹಣೇಬರಹ ಏನು ಅಂತ. ಅವರು ಇನ್ನೊಬ್ಬರ ಹೆಂಡತಿ ಜತೆಗೆ ಓಡಿಹೋಗ್ಬೇಕು ಅಂತ ಸೆಕೆಂಡ್ ಫೈವ್ ಇಯರ್ ಪ್ಲಾನ್ ಹಾಕಿದ್ದರು. ಅದಕ್ಕೆ ಅನುಕೂಲ ಆಗಲಿ ಅಂತ ಆದಷ್ಟು ಹಣಾನ ದೋಚ್ತಾ ಇದ್ದರು. ಈ ರೋಗಿ ಚಾಡಿ ಹೇಳಿದ್ದು ಕೇಳಿ, ರೇಗುತ್ತಾ ನಾನಿದ್ದ ವರಾಂಡಾ ಮೂಲೆಗೆ ಬಂದರು. ಆರು ತಿಂಗಳು ಅಲ್ಲಿದ್ದೆ. ಒಂದು ದಿವಸಾನೂ ದೊಡ್ಡ ಡಾಕ್ಟರು ಅತ್ತ ಮುಖಾನೇ ತೋರಿಸಿರಲಿಲ್ಲ. ನಾವು ಮೂವತ್ತು ಬಿಕನಾಸಿ ರೋಗಿಗಳು ಅಲ್ಲಿದ್ವೋರು. ಸುಖವಾಗಿದ್ದೆವು. ಈ ದಿನ ಬಂತಲ್ಲಪ್ಪ ಹೊತ್ತುಗಾಲ, ದೊಡ್ಡ ಡಾಕ್ಟರು ಬಂದರು, ಎಲ್ಲರನ್ನೂ ಪರೀಕ್ಷೆ ಮಾಡುಕ್ಕೆ ಶುರು ಹಚ್ಚಿದರು ನನ್ನ ತಾವ ಬಂದು, ನೀನೇನೋ ಕೈ ನೋಡೋನು ಎಂದು ಕೇಳಿದರು. ಹ್ಞೂ ಅಂದೆ.

ಇವನ್ನ ಆಪರೇಷನ್ ಥಿಯೆಟರಿಗೆ ಕರಕೊಂಡು ಬನ್ನಿ, ಅಲ್ಲಿ ಪರೀಕ್ಷೆ ಮಾಡ್ತೀನಿ ಎಂದರು. ನನಗೆ ಝುಂಗಾ ಬಲವೇ ಉಡುಗಿ ಹೋಯ್ತು. ಅವರು ಹೊರಟುಹೋದರೂಕೂಡ. ಆಗ ಲಕ್ಕಪ್ಪ ಬಂದ. ಹೆದರಬೇಡ! ಹೋಗು ಆಪರೇಷನ್ ಥಿಯೇಟರಿಗೆ, ಗರುಡ ಕೈಗೆ ಬಿದ್ದ ಹೊರತು ಅವರು ಚಾಕು ಹಿಡಿಯಲ್ಲ. ಹೋಗು, ಇನ್ನೇನೋ ಮರ್ಮ ಐತೆ ಅಂದ.

ಆಪರೇಷನ್ ಥಿಯೇಟರಿಗೆ ಹೋದೆ. ಚೆಂದುಳ್ಳಿ ನರ್ಸ್ ಒಬ್ಬಳು ಅಪ್ಸರೆ ಹಾಗೆ ಕಾಣಿಸ್ತಾ ಇದ್ದ ದುಡುಮಿ ಬಾ ಅಂತ ಒಳಕ್ಕೆ ಕರಕೊಂಡು ಹೋಗಿ ಆಪರೇಷನ್ ಮೇಜಿನ ಆಕಡೆ ನನ್ನ ಕೂರಿಸಿದಳು.

ದೊಡ್ಡ ಡಾಕ್ಟರು ಕೈ ತೊಳೆದುಕೊಳ್ಳುತ್ತಾ ಇದ್ದರು ಸೋಪು ತಿಕ್ಕಿ ತಿಕ್ಕಿ ತೊಳೆದುಕೊಂಡು, ಆಮೇಲೆ ಕೈ ಒರಸಿಕೊಂಡರು. ವಾರೆ! ಷೇರ್! ಇದೇನು ಸೋಜಿಗ ಅಂತ ನಾನಂದುಕೊಳ್ಳುವ ಹೊತ್ತಿಗೆ, ಆಪರೇಷನ್ ಮೇಜಿನ ಆಕಡೆ ಬಂದು ಅವರು ಕೂತರು. ಆಪರೇಷನ್ ಮೇಜಿನಮೇಲೆ ಅವರು ಕೈ ಇಟ್ಟರು. ದೊಡ್ಡ ದೀಪಾನ, ನೆರಳುಬೀಳದ ದೀಪಾನ, ನರ್ಸ್ ಹಚ್ಚಿದಳು.

ಈಗ ನನ್ನ ಕೈ ನೋಡಿ ಹೇಳು ಎಂದರು ದೊಡ್ಡ ಡಾಕ್ಟರು. ಬಿಟ್ಟೆ ಒಂದು ರೈಲ್ನ. ತೂಫಾನ್ ಮೈಲ್ ತರಹ ಭವಿಷ್ಯ ನುಡಿದೆ ಭಾರತಿಯರು ಸಾಮಾನ್ಯವಾಗಿ ಎರಡನೇ ಇನ್ನಿಂಗ್ಸ್‌ನಲ್ಲಿ ಜಯ ಗಳಿಸೋದು ಯಶಸ್ಸು ಸಂಪಾದಿಸೋದು, ಸುಖಪಡೋದು ಎಂದು ಮುಗುಮ್ಮಾಗಿ ಅಂದೆ.

ದುಡುಮಿ ನರ್ಸಮ್ಮ ಕೈ ತೊಳೆದುಕೊಳ್ಳುತ್ತಾ ಇದ್ದಳು. ದೇಹದ ಕೊಳೇನೆಲ್ಲಾ ಅಂಗೈ ತಿಕ್ಕಿ ಸರಿಮಾಡಿಕೋತಾಳೋ ಅನ್ನೋಹಾಗೆ, ಅರ್ಥ ಸಚಿವರು ಪ್ರಜೆಗಳನ್ನು ಜರೂರು ಹಿಂಡೋಹಾಗೆ ಕೈ ಕೈ ಹಿಂಡ್ತಾ ಇದ್ದಳು.

ಇವರದಾಗುತ್ತಲೂ, ಅವಳು ಒಂದು ಅಂಗ್ಶೈ ಚಾಚಿದಳು. ಆ ಆಪರೇಷನ್ ಮೇಜಿನಮೇಲೆ, ದೀಪದ ಕೆಳಗೆ. ಅವಳು ಕುಳಿತ ಥಾಟ ಮೇಜಿನ ಅಂಚಿಗೆ ಒತ್ತಿಕೊಂಡು ಕೂತ ಠೀವಿ, ಇವನ್ನು ನಾನು ಗಮನಿಸದೆ ಇರಲಿಲ್ಲ ಅವಳಿಗೂ ಅವರಿಗೆ ಹೇಳಿದ ಭವಿಷ್ಯಾನೆ ಹೇಳಿದೆ. ಹೆದರಬೇಡಿ. ಹೃದಯ ಹೇಳಿದ ಹಾಗೆ ಮಾಡಿ ಎಲ್ಲಾ ಶುಭವಾಗತ್ತೈತೆ ಎಂದೆ.

ಇಬ್ಬರೂ ನಕ್ಕರು. ಈಗ ಹೊರಟುಹೋಗು. ಈ ಆಸ್ಪತ್ರೆ ಬಿಟ್ಟು ಹೊರಟು ಹೋಗು ಈ ಊರು ಬಿಟ್ಟು ಹೊರಟು ಹೋಗು ನೀನಿದ್ದರೆ ಇಷ್ಟೆಲ್ಲಾ ತಿಳಿದ ಮೇಲೆ, ನಮಗೆ ಕಷ್ಟ. ಇನ್ನೊಂದು ಸರ್ತಿ ನಿನ್ನ ಮುಖಾನಕಂಡರೆ ಹಿಡಕೊಂಡು ಬಂದು ಔಷಧಿ ಕುಡಿಸಿ ಕುಯ್ದುಹಾಕಿಬಿಡ್ತೇನೆ ಎಂದರು. ದೊಡ್ಡ ಡಾಕ್ಟರು. ಎರಡು ಗರುಡನ್ನ ನನ್ನ ಕೈಲಿಟ್ಟರು ಬೆನ್ನತಟ್ಟಿ ದಬ್ಬಿದರು.

ಅವತ್ತೇ ಪುಂಗನಾಯಕನ ಹಳ್ಳಿಗೆ, ಷಹರಿನಿಂದ ನಡೆದುಕೊಂಡೇ ಬಂದು ಬಿಟ್ಟೆ ಆರು ಗರುಡ, ಹದಿಮೂರು ಗಿಡಗ, ಕಾಗೆ ಗುಬ್ಬಚ್ಚಿ ಲೆಕ್ಕವಿಲ್ಲದಷ್ಟು ನನ್ನ ಸೊಂಟದ ಪಟ್ಟಿಯಲ್ಲಿತ್ತು. ಹಕ್ಕಿಹಾಗೆ ಹಾರ್ತಾ ನಮ್ಮ ಹಳ್ಳೀಗೆ ಬಂದು, ಜಮೀನು ಕೊಂಡು, ಈಗ ಸುಖವಾಗಿದ್ದೇನೆ.

—ಪ್ರಕಾಶ್



" ಆ ಅಂಗ್ಡಿಗ್ ನುಗ್ದ್ರೆ ಅರ್ಧರ್ಧ ಕೆ. ಜಿ. ಸಕ್ರೆ ಸಿಕ್ತ್ರೆ"

ಮಠದಲ್ಲಿ ಮಿಷಿನ್ನು

ಗಾಂಪರೊಡೆಯರು ಆಗತಾನೆ ತಮ್ಮ ಹಿರಿಯ ಗತಿಸಿದ ಗುರುಗಳಿಗೆ ಎಳ್ಳು ನೀರು ಬಿಟ್ಟು ಜಪ ಮಾಡುತ್ತಾ ಕೂತಿದ್ದರು. ಮಂಕನು ಅಂದಿನ ಟಪಾಲನ್ನು ತಂದು ಗುರುಗಳೆದುರಿಗೆ ಇಟ್ಟ.

"ತಥಾಸ್ತು"-ಅಂದರು. ಬಂದ ಒಂದೇ ಲಕೋಟೆಯನ್ನು ಹರಿದು ಓದಿದ ಮಂಕ.

"ವೆ|| ಬ್ರ|| ಪಾರಿವ್ರಾಜಕಾಚಾರ್ಯ ಏಕವಸ್ತ್ರಧಾರಿ, ಭಸ್ಮಪ್ರಿಯ, ಗುರು ಗಾಂಪರೊಡೆಯರ ಸನ್ನಿಧಾನಕ್ಕೆ-ಬಾಲಕ ಕಿಟ್ಟಪ್ಪನ ಶರಣಾರ್ತಿಗಳು ಗುರುಗಳೇ ನಿಮ್ಮ ಮಠದ ಕುದುರೆ ಸತ್ತಿದ್ದು ಮೊನ್ನೆ ತಾನೆ ನನಗೆ ತಿಳಿಯಿತು.

ಅನೇಕ ದಿನಗಳಿಂದ ನನ್ನ ಕೈಲಾದ ಕಿರು ಕಾಣಿಕೆಯನ್ನು ಆ ಹಿರಿಯ ಗಾಂಪ ಮಠಕ್ಕೆ ಅರ್ಪಿಸಬೇಕೆಂದು ಆಸೆ ಪಟ್ಟಿದ್ದುಂಟು. ಪರಂತು ನಿಮ್ಮ ಹಳೆಯಕಾಲದ ವೈಭವದ ಚಿರಸ್ಮರಣೀಯ ಕುದುರೆಮೊಟ್ಟೆಯ ಕಥೆ ನೆನಸಿಕೊಂಡು ಅಂತಹ ಸೊಗಸಾದ ಪರಂಪರೆಯುಳ್ಳ ಮಠ ಕಾಲಕ್ಕೆ ತಕ್ಕಂತೆ ಪರಿವರ್ತನೆಗೊಳ್ಳುವುದು ಸಹಜವಷ್ಟೆ. ಅನೇಕ ಮಠಗಳ ಸ್ವಾಮಿಗಳು ಕೃಷ್ಣಾಜಿನದ ಸೀಟಿನ ಕಾರುಗಳಲ್ಲಿ ಕೂತು ಭಕ್ತರಿಗೆ ದರ್ಶನ ಕೊಡುವುದಿಲ್ಲವೆ?

ಹಾಗೆಯೇ ನಿಮಗೊಂದು ಜೀಪು ಕೊಡೋಣವೆಂದಿದ್ದೆ. ಆದರೆ ಜೀಪಿಗೂ ರಾಜಕೀಯಕ್ಕೂ ಒಂದು ನಿಕಟ ಸಂಬಂಧವಿದ್ದು ಜೀಪ್ ಸ್ಕ್ಯಾಂಡಲಿನಂತೆ ನಿಮ್ಮ ಮಠವೂ ಕಾಂಗ್ರೆಸ್ ಮಠ ಎಂದು ಜನ ತಿಳಿದಾರು ಎಂದು ಅದನ್ನು ನಮ್ಮ ಮನೆ ಹಿತ್ತಲಲ್ಲಿಯೇ ಹೂತಿದ್ದೇನೆ.

ಆಧುನಿಕ ವಾಹನವಾದ ಒಂದು ಸ್ಕೂಟರ್ ನಿಮ್ಮ ಮಠಕ್ಕೆ 'ದಾನ' ಕೊಟ್ಟು ಕುದುರೆ ಇಲ್ಲದ ಕೊರತೆ ನೀಗಿಸಿ ಅದರ ಮೇಲೆ ಕೂತು ನೀವು ಮೆರವಣಿಗೆ ಹೊರಟು ಭಕ್ತರಿಗೆ ದರ್ಶನ ಕೊಡುವ ದಿವ್ಯ ದೃಶ್ಯ ನೋಡುವ ದುರಾಶೆಯೇ ನನ್ನನ್ನು ಈ ದಾನಕ್ಕೆ ಪ್ರೇರೇಪಣೆ ಮಾಡಿದ್ದು.

ಗುರುವೆ ನಾಳೆ ಮುಂಜಾನೆ ಶೀಗೇಬೇಲಿ ಅಗ್ನಿ ರಸ್ತೆ ಜಾಗಟೆ ಶಿವಣ್ಣನ ಗಲ್ಲಿಯ ಸಂದಿನಲ್ಲಿ ಮೂರನೆ ಮನೆಯ ಮುಂದೆ ಈ ಸ್ಕೂಟರು ನಿಂತಿದೆ ತೆಗೆಸಿಕೊಂಡು ಹೋಗಿ, ಭಕ್ತನಿಗೆ ಅದರಿಂದ ಮುಕ್ತಿ ದೊರಕಿಸಿ ಕೊಡಬೇಕೆಂದು ವಿನಂತಿ.

ಇತಿ ನಿಮ್ಮ ಭಕ್ತ,
ಕಿಟ್ಟಪ್ಪ
ಉರುಫ್ ಕೃಷ್ಣಸ್ವಾಮಿ.

" ಮಂಕೂ ಯಾರು ಈ ಕಿಟ್ಟಪ್ಪ ?"

" ಗುರುಗಳೇ ಯಾರೋ ಪಾಪ ಮಠದ ಭಕ್ತ ನಾನೂ ನಿಮಗೆ ಇಂಗ್ಲೆಂಡಿನಿಂದ ಬಂದಂದಿನಿಂದ ಹೇಳುತ್ತಲೇ ಇದ್ದೆ-ಕುದುರೆ ಸತ್ತ ಮೇಲೆ ಮಠಕ್ಕೆ ವಾಹನವಿಲ್ಲ ವೆಂದರೆ ಶೋಭಿಸದು ಒಂದು ಸೈಕಲ್ಲಾದರೂ ಇರಲಿ ಬಡ ಮಠಕ್ಕೆ ಎಂದೆ-ತಾವು ಹಳೇ ಟ್ರೈಸಿಕಲ್ ತರಲು ಬಯಸಿದಿರಿ ನಿಮ್ಮ ಭಾರ ತಡೆಯುವ ಮೂರು ಚಕ್ರದ ಸೈಕಲ್ಲು ಸಿಕ್ಕದೆ ಹೊಯಿತು-ಈಗ ಅನಾಯಾಸವಾಗಿ ಮಠಕ್ಕೆ ದಾನವಾಗಿ ಬರ್‍ತಾ ಇದೆ ಈ ಸ್ಕೂಟರ್‍ರು ಯಾಕೆ ಬ್ಯಾಡಾನ್ನ ಬೇಕು ?"

" ತಥಾಸ್ತು-ನಾಳೆ ತರಿಸಿಬಿಡಿ" ಎಂದು ಜಪಮಾಲೆ ಎಣಿಸುತ್ತಿದ್ದಂತೆ ಮಂಕ ಇನ್ನೊಂದು ಪತ್ರ ತೆಗೆದು ಓದಿದ

" ಗುರುವೇ ಇದು ಲಂಡನ್ ಕಾಗದ"-ಎಂದಾಗ ಗುರು ಗಾಂಪರ ಮುಖ ಪ್ರಫುಲ್ಲವಾಯಿತು.

" ಇಲ್ಲಿ ಕೊಡು"-ಎಂದು ಹಸಿರು ಮನೆಯ ಕಾಗದ ಓದಿದರು. ಆಕೆ ಅಕ್ಷರ ಓದಲಿಕ್ಕೆ ಆಕೆಯೇ ಬರಬೇಕು-ತುಟಿ ಹತ್ತಿರ ಹಿಡಿದು ಓದಿದರು ಉಹುಂ ಅಕ್ಷರ ಕಲರಿ ಕಾಗದದಲ್ಲಿ ದೊರ್‍ಸಾನಿಯ ಮುಖ ಬಂದು ಕೂತಿತು. ಈ ಕಾಗದ ಓದೋ ಕಾಗೊಲ್ಲ-ಎಂದು ಆ ಕಾಗದವನ್ನು ಆನಂದವಾಗಿ ಅಗಿದು ಜಗಿದು ನುಂಗಿ ನೀರು ಕುಡಿದುಬಿಟ್ಟರು. ತೇಗಿ ಹೇಳಿದರು, "... ಶಿಷ್ಯರಿರಾ ನಾಳೆ ಮುಂಜಾನೆ ಸ್ಕೂಟರು ಮಠಕ್ಕೆ ಬರತಕ್ಕದ್ದು-ಅದನ್ನು ಏರಿ ನಾವು ಲಂಡನ್ನಿಗೆ ತೆರಳುವವರು"....ಎಂಧು ಕನಸಿನಲ್ಲಿ ಹೇಳುವಂತೆ ಹೇಳಿ ಮಲಗುವ ಮನೆಗೆ ತೇಲಿ ಹೋದರು.

* * * *

ಪ್ರಾತಃಕಾಲದಲ್ಲಿ ಎದ್ದ ಮಂಕ, ಮಡಿಯ, ಮುಟ್ಠಾಳ, ಮಡ್ಡಿಗಳು ಗುರುಗಳಿಗೆ ವಂದಿಸಿ ಪುರಿ ಉಂಡೆ ತಿಂದು ನೀರು ಕುಡಿದು ' ಗುರುಗಳೇ ಮಠಕ್ಕೆ ಮಿಷಿನ್ನು ಸ್ಕೂಟರು ಮಿಷಿನ್ನು ತರಲು ಹೊರಡುವೆವು ಆಶೀರ್ವದಿಸಿ' ಎಂದು ಕೈಮುಗಿದರು. ಕರಗದ ಸುತ್ತಮುತ್ತಲಿನ ವೀರಕುಮಾರರಂತೆ ಶೋಭಿಸಿದರು ಈ ಶಿಷ್ಯರು.

" ತಥಾಸ್ತು....ಬೇಗ ಬನ್ನಿ ವಿಜಯೀಭವ"-ಎಂದು ಫಲ ಮಂತ್ರಾಕ್ಷತೆ ಕೊಟ್ಟರು. ಶಿಷ್ಯರೆಲ್ಲಾ ಮಂತ್ರಾಕ್ಷತೆಯನ್ನು ತಿಂದು ಜೈ ರಘುವೀರ ಎಂದು ಅಂಜನಪರ್ವತಕ್ಕೆ ನೆಗೆದ ಆಂಜನೇಯನಂತೆ ಹಾರಿ ಹೋದರು. ಜಾಗಟೆ ಶಿವಣ್ಣನ ಗಲ್ಲಿ ಸೇರಿದಾಗ ಬಿಸಿಲು ತಕ್ಕಮಟ್ಟಿಗೆ ಚುರುಕಾಗಿತ್ತು.

ಕಿಟ್ಟಪ್ಪ ಮೂಲೆ ಬೂತ್ ಅಂಗಡಿ ಮುಂದೆ ಸಿಗರೇಟು ಸೇದುತ್ತಿದ್ದವನು ಮಠದ ನಾಲ್ಕು ಮಂದಿ ವಟುಗಳನ್ನು ನೋಡಿದ ಕೂಡಲೆ-ಸಿಗರೇಟು ಆರಿಸಿ ಬಚ್ಚಿಟ್ಟು

"ಬನ್ನಿ ಬನ್ನಿ"-ಎಂದ. ಸಿಗರೇಟು ಬಚ್ಚಿಟ್ಟದ್ದು ಶಿಷ್ಯರಿಗೆ ಗೌರವ ತೋರಿಸುವ ದೃಷ್ಟಿಯಿಂದಲ್ಲ-ಅವರೆಲ್ಲಿ ಸಿಗರೇಟಿಗೆ ಗಂಟು ಬೀಳುವರೋ ಎಂಬ ಭಯದಿಂದ.

"ಕಿಟ್ಟಪ್ಪಾ-ಸ್ಕೂಟರ್ ಎಲ್ಲಿ?"

—ಎಂದಾಗ ಮನೆಯ ಪಕ್ಕದಲ್ಲಿ ಕರೆದೊಯ್ದು ಹಳೇ ಗೋಣಿಚೀಲ ಮುಚ್ಚಿದ ಯಂತ್ರವನ್ನು ತೋರಿಸಿದ.

"ತೊಗೊಂಡು ಹೋಗೋಕೆ ಏನು ತಂದಿದೀರ?"-ಎಂದ ಕಿಟ್ಟಪ್ಪ.

"ಲಾರಿ ತರಬೇಕಾಗಿತ್ತೆ?"

"ಮತ್ತೆ! ಹೆಂಗೆ ಒಯ್ತೀರಿ?"

"ಹತ್ತಿರದಲ್ಲಿ ಎಲ್ಲಾದರೂ ಫೋನಿದೆಯೆ?"

"ಯಾಕೆ?"

"ಆಂಬುಲೆನ್ಸ್‌ಗೆ ಫೋನು ಮಾಡಿದರೆ ಈ ಜಖಂ ಆದ ಯಂತ್ರ ಮಠಕ್ಕೆ ಸೇರಿಸುತ್ತಾರೆ ಅಲ್ವೆ?"

ಅದೇನೋ-ದಾನ ಮಾಡಿ ಆಯ್ತು ಅದನ್ನ ಸಾಗಿಸೋ ಭಾರ ನಿಮ್ದು,"

"ಮಠಕ್ಕೆ ಬಿಟ್ಟುಕೊಂಡು ಬರೋಕಾಗೊಲ್ವೆ?"

"—ಇಲ್ನೋಡೊ ಮಂಕಾ ಕೊಂಚ ರಿಪೇರಿ ಆಗಬೇಕು ಇದು ಅಷ್ಟೆ ಇಲ್ದಿದ್ರೆ ನಾನೇ ತಂದುಬಿಡ್ತಿದೆ-ಬೇಗ ಸಾಗಿಸಿ ಅದು ಇಲ್ಲಿಂದ ಹೊರಗೆ ಹೋಗೊವರ್‍ಗೂ ಊಟ ಹಾಕಲ್ಲಂತೆ ನನ್ನ ಹೆಂಡ್ತಿ-ನನ್ನ ಉಪಾಸ ಕೆಡವಿದ ಪಾಪ ಬರುತ್ತೆ ನೀವು ತಡ ಮಾಡಿದರೆ"

—ಧರ್ಮಸಂಕಟದಲ್ಲಿ ಸಿಗಿಸಿಬಿಟ್ಟ ಗಾಂಪರ ಶಿಷ್ಯರನ್ನ ಕಿಟ್ಟಪ್ಪ. ಕಿಟ್ಟಪ್ಪನಿಗೆ ಊಟ ಹಾಕಿಸುವ ಪುಣ್ಯದ ದೃಷ್ಟಿಯಿಂದಾದರೂ ಈ ಸತ್ತ ಸ್ಕೂಟರನ್ನು ಅಲ್ಲಿಂದ ಸಾಗಿಸಬೇಕಾಗಿತ್ತು.

"ಏನು ಮಾಡೋಣ ಮಂಕ"

"ಎತ್ತಿನಬಂಡೀಲಿ ಹೇರ್‍ಕೊಂಡು ಹೋದ್ರೆ?"

"ಈ ಗಲ್ಲಿಗೆ ಗಾಡಿ ಬರೊಲ್ಲ"-ಮಡೆಯ.

"ಒಂದು ಉಪಾಯ....ಹೀಗೆ ಮಾಡಿದರೆ ಹೇಗೆ?...."

—ತನ್ನ ಉಪಾಯ ಸೂಚಿಸಿದ ಮಂಕ. ಹಾಗೇ ಮಾಡಿದರು ಗಾಂಪರ ಶಿಷ್ಯರು.

* * * *

ತಮ್ಮ ವೈಭವದ ಸ್ಕೂಟರ್ ಮೆರವಣಿಗೆಯ ದೃಶ್ಯ ಕಲ್ಪಿಸಿಕೊಂಡು ಮಠದ ಮುಂದೆ ಕಾದಿದ್ದರು. ಇಡೀ ರಸ್ತೆಯೇ ಕೌತುಕದಿಂದ ಹುಡುಗರು-ತಾಯಂದಿರು ತಮ್ಮಂದಿರು ಎಲ್ಲರೂ ತಂತಮ್ಮ ಮನೆಗಳ ಮುಂದೆ ಬರುತ್ತಿದ್ದ ಮೆರವಣಿಗೆಗಾಗಿ ಕಾದಂತೆ ಕಾದಿದ್ದರು.

ಹುಡುಗರ ಕೇಕೆ-ನಾಯಿಗಳ ಬೊಗಳು-ಕತ್ತೆಗಳ ಅರಚು-ಹೊಲಸು ಬೀದಿಯ ನಡುವೆ ದಿಬ್ಬಣ ಬಂದಂತೆ ಬಂತು ಮಠಕ್ಕೆ ಮಿಷಿನ್ನು.

ಹೇಗೆ ಬಂತು!

"ಮುಂದೆ ಮಂಕ ಮಡೆಯರ್ ಹೆಗಲು ಕೊಟ್ಟಿರಲ್-ಹಿಂದೆ ಮಡ್ಡಿ-ಮರುಳರ್ ಶೋಭಿಸುತ್ತಿರಲ್-ಗಾಂಪರೊಡೆಯರ್ ತಮ್ಮ ಶಿಷ್ಯರ್ ತರುತಿರ್ದ ಸ್ಕೂಟರಂ ನೋಡಿ ದಣಿದರ್-ಹಾಡಿ ದಣಿದರ್-ಕಣ್ಗೆ ಹಬ್ಬವಲಾ ಈ ನೋಟ ಎಂದು ಹಿಗ್ಗಿದರ್ ಗುರುಗಳ್...."

— ಜಾಗಟೆ ಶಿವಣ್ಣನ ಗಲ್ಲಿಯ ಬಳಿಯ ಕಂಬ್ಳಿ ಕಂಪನಿಯಿಂದ ಮಂಕ ಒಂದು ಸ್ಟ್ರೇಚರ್ (ನಡೆಯಲಾರದ ರೋಗಿಗಳನ್ನು ಹೊತ್ತು ತರುವ ಆಧುನಿಕ ಚಟ್ಟ) ತಂದಿದ್ದ. ಅದರ ಮೇಲೆ ಈ ಕೆಟ್ಟ ಕಿಟ್ಟಪ್ಪ ದುರ್ದಾನ ಕೊಟ್ಟ ಈ ಸ್ಕೂಟರನ್ನು ಮಲಗಿಸಿ ಮಠಕ್ಕೆ ತಂದಿದ್ದರು.

ಸ್ಟ್ರೆಚರ್‍ನ್ನು ಮಠದ ಅಂಗಳದಲ್ಲಿ 'ಜೈಶಂಕರ್' ಎಂದು ಇಳಿಸಿದರು.

"ಕದಲಾರತಿ ಮಾಡಿ ಒಳಕ್ಕೆ ಬರಬೇಕು ಎಂದರು ಗುರುಗಳು"

—ಎದುರುಮನೆ ಲಕ್ಷ್ಮಿ-ಸುಬ್ಬಿ ಇವರುಗಳು ತಟ್ಟೆಯಲ್ಲಿ ಆರ್ತಿ ತಂದು ಶಿಷ್ಯರನ್ನೂ, ಗುರುಗಳನ್ನೂ ಸ್ಕೂಟರ ಮುಂದೆ ನಿಲ್ಲಿಸಿ ಮುಖಕ್ಕೆ ಮಂಗಳಾರತಿ ಮಾಡಿದರು.

"ಶಿಷ್ಯರುಗಳಾ ಒಳ್ಳೇ ದಿನದಲ್ಲಿ ಇದನ್ನ ನಾವು ಆರೋಹಣ ಮಾಡಬೇಕು"-ಎಂದರು

"ಗುರುಗಳೇ ಇವತ್ತು ಬಹಳ ಚೆನ್ನಾಗಿದೆ ದಿನ-ನೀವು ಸ್ಕೂಟರಮೇಲೆ ಕೂತ್ಕೊಳ್ಳಿ-ಸ್ಕೂಟರು ಹ್ಯಾಗೂ ಸ್ಟ್ರೇಚರ್ ಮೇಲೇ ಇದೆ-ಹೊರೋಕೆ ನಾವುಗಳು ಇದ್ದೀವೆ ...ಮಠದ ಕೊಂಬು ಕಹಳೆ ಶಂಖ ಊದಿಸಿಕೊಂಡು ಪುರದ ಪ್ರಮುಖ ರಸ್ತೆಗಳಲ್ಲಿ ಯಾಕೆ ಮೆರವಣಿಗೆ ಹೋಗಬಾರದು?"

—ಗುರುಗಳು ಚಿಂತಾಸಮಾಧಿತರಾದರು "ಈ ಸತ್ತ ಸ್ಕೂಟರನ್ನು ಹಳೇ ಕಬ್ಬಿಣದಂಗಡಿಗೆ ಮಾರುವ ಬದಲು ಈ ಮಠದ ಪ್ರಾಣ ಯಾಕೆ ತೆಗೆಯುತ್ತಾರೆ-ಜನ?"-ಎಂದು ಪೇಚಾಡಿದ ರಸ್ತೆಯಲ್ಲಿನ ಪ್ರಮುಖನೊಬ್ಬ.

ಮತ್ತೊಬ್ಬ ಮೆಕ್ಯಾನಿಕ್ ಮೈಂಡೆಡ್ ಮನುಷ್ಯ "ಇದನ್ನು ಸಂಮಾಡಿಬಿಡಬೇಕು-ಮಠಕ್ಕೆ ಶೋಭಾಯಮಾನವಾಗಿರುತ್ತೆ ಈ ಮಿಷಿನ್ನು"

"ಆ ಕೆಟ್ಟ ಕಿಟ್ಟಪ್ಪಂದು ಈ ಸ್ಕೂಟರು-ಹನ್ನೆರಡು ಕೋಳಿ-ಮೂರು ನಾಯಿ-ಒಂದು ಕತ್ತೆ-ಬಲಿ ಹುಯ್ದ ಧೀರ ಈ ಲ್ಯಾಂಬ್ರೆಟ್ಟಾ-ಇದಕ್ಕೆ ಲ್ಯಾಂಬ್ (Lamb)ಗಳನ್ನು ಕೊಲ್ಲುವ ಮಹಾ ಆಸೆ...ಜಾಗಟೆ ಶಿವಣ್ಣನ ಗಲ್ಲಿಯಲ್ಲಿ ಬೇಸತ್ತ ಜನ ಇದನ್ನೇ ಕೊಂದರು"-ಎಂದು ಇದರ ಪೂರ್ವಕಥೆ ಹೇಳಿದ ಒಬ್ಬ ರಿಟೈರ್ಡ್ ಸಾಹಿತಿ. ಈಗೇನು ಮಾಡೊದೂಂತ ಆಯ್ತು?"

—ಎಂದು ಇಡೀ ಬೀದಿಯದೇ ಸಮಸ್ಯೆ ಈ ಮಿಷಿನ್ನು ಮಠಕ್ಕೆ ಬಂದದ್ದು ಎಂಬಂತೆ ರಸ್ತೆಯ ಪ್ರಮುಖರು ಸಭೆ ಸೇರಿದರು.

ಗಾಂಪರೊಡೆಯರು ಮಾತ್ರ ದಿಕ್ಕೆಡಲಿಲ್ಲ, ಗಾಬರಿ ಬೀಳಲಿಲ್ಲ. ಎದ್ದು ಒಳಗೆ ಹೋಗಿ ಕಮಂಡಲ ತಂದು ನೀರು ಪ್ರೋಕ್ಷಣೆ ಮಾಡಿ-"ಈ ಹೆಣವನ್ನು ಈ ಚಟ್ಟದಿಂದ ಎತ್ತಿ ಗೋಡೆಗೊರಗಿಸಿ ಕಂಬಳಿ ಹೊದ್ದಿಸಿಬಿಡಿ"-ಎಂದರು.

ಶಿಷ್ಯರು-ಬೀದಿಗರೂ ಸೇರಿ ಆ ಕೆಲಸ ಮಾಡಿದರು.

"ಭಕ್ತರೇ ನಾವು ದೇಶ ದೇಶಗಳನ್ನು ತಿರುಗಿದವರು-ಇಟಲಿ ದೇಶದವರಿಗೆ ಇಡ್ಲಿ ಮಾಡುವುದನ್ನು ಕಲಿಸಿದ್ದೇವೆ ...ಆ ದೇಶದಲ್ಲೇ ತಯಾರಾದ ಈ ಲ್ಯಾಂಬ್ರೆಟ್ಟಾ ರಿಪೇರಿ ಮಾಡಲು ಇದರ ಫ್ಯಾಕ್ಟರಿಗೇ ತಂತಿ ಕೊಟ್ಟು ಪ್ರವೀಣರನ್ನು ಕರೆಸಿ ಇದನ್ನು ರಿಪೇರಿಸುವೆವು. ಚಿಂತೆ ಬೇಡ ನಾವು ಇದರ ಮೇಲೆ ಕೂತು ಮತ್ತೊಮ್ಮೆ ಇಂಗ್ಲೆಂಡಿಗೆ ಹೋಗುವ ಸಂಕಲ್ಪ ಮಾಡಿದ್ದೇವೆ. ಪರಂತು ಸಧ್ಯಕ್ಕೆ ನಮಗೆ ಆಹ್ನಿಕಕ್ಕೆ ಹೊತ್ತಾಯ್ತು-ಫಳಾರಕ್ಕೆ ಅಣಿಯಾಗಲಿ"

—ಎಂದರು. ಈ ಮಿಷಿನ್ನು ಸರಿಯಾಗಲು ಇದರ ಪ್ರತಿ ಬಿಡಿ ಭಾಗಗಳನ್ನೂ ಬದಲಾಯಿಸಬೇಕು ಅದರ ಬದಲು ಹೊಸ ಮಿಷಿನ್ನೇ ಕೊಳ್ಳಬಹುದು! ಆದರೆ ಮಠಕ್ಕೆ ದಾನ ಬಂದದ್ದು ಬಿಡಬಾರದು-ಎಂದು ಗಾಂಪರೊಡೆಯರು ಆ ಸ್ಕೂಟರಿಗೆ ನಮಸ್ಕರಿಸಿ ಒಳಕ್ಕೆ ಹೋದರು.

ಗಾಂಪರು ಇದನ್ನು ಬಿಡಲು ಕಲಿತರೆ? ಮುಂದೊಮ್ಮೆ ಇದೇ ಕೊರವಂಜಿಯಲ್ಲಿ ಬಂದೀತು ಆ ಕತೆಯೂ-ಕಾದು ನೋಡಿ.

—ದಾಶರಥಿ ದೀಕ್ಷಿತ್.

ಹೆಬ್ಬಾಲೆಯ ಹುಂಜಗಳು ಬಲು ಜಾಣತನ ತೋರಿಸುತ್ತವೆಯಂತೆ.

—ಹೆಣ್ಣಿನ ಗಮನಸೆಳೆಯಲು, ಲೇ ಲೇಲೇ ಅಂತ ಘರ್ಜಿಸಿ, ಕೂಡಲೆ ತಲೆಯನ್ನು ರೆಕ್ಕೆಯ ಮರೆಯಲ್ಲಿ ಹುದುಗಿಸಿಕೊಳ್ಳುತ್ತವಂತೆ.!

* * * *

ವಿದ್ಯುಚ್ಛಕ್ತಿಯ ಮಿತವ್ಯಯಕ್ಕೆ

ಹಾಗೂ

ಪ್ರಕಾಶಮಾನವಾಗಿರುವುದಕ್ಕೆ

★

ಬೆಂಗಾಲ್ ಬಲ್ಬುಗಳು

★

ಬೆಂಗಾಲ್ ಎಲೆಕ್ಟ್ರಿಕಲ್ಸ್, ಬೆಂಗಳೂರು-೩

Koravanji, June, 1963.


For 3 way Beauty Treatment....
RAJA
SNOW
AMLA HAIR OIL , KASTURI SOAP
MANYAM & CO. BANGALORE MADRAS MADURAI BOMBAY

Printed by B. S. Iyengar, Bangalore City.

Publisher—B. N. Gupta Editor—M. Sivaram.